[16]ಣಭಟ್ಟೋಪಾಧ್ಯಾಯರಿಗೆಪ್ರತಿಷ್ಠೆಯದಕ್ಷಿಣೆಗೆದೇವತಾಸಣ್ಣಿಧಾನದಲುಕಾಲಂಕ
[17]ಱ್ಱಿಧಾರೆಯೆಱಿದುಆಯೆರಡುದೇವರನ್ಮಾನವಂಕೊಟ್ಟರುವಿಜಯಸಂವತ್ಸರದವುಶ್ಯಬ ೪ ಮಂಗ
[18]ಳವಾರದಲುತ್ತರಾಯಣಸಂಕ್ರಮಣದಲುಸಮಸ್ತರಾಜ್ಯಭರನಿರೂಪಿತಮಹಾಮಾ
[19]ತ್ಯಪದವಿವೀರರಾಜಮಾನವಾನೋನ್ನತಪ್ರಭುಮಂತ್ರೋತ್ಸಾಹಸಕ್ತಿತ್ರಯಸಂಪನ್ನನಪ್ಪ
[20]ರಾಜಾಧ್ಯಕ್ಷಹೆಗ್ಗಡೆನಾಕಣ್ಣನುಕೇಶವದೇವರಗಱ್ದ್ದಿಯಹತ್ತಿರೆಮೂಡದೆಸೆಯಲುಆಚಾರ್ಯ್ಯ
[21]ಅಪ್ಪಣಭಟ್ಟೋಪಾಧ್ಯಾಯರಿಗೆಕಾಲಂಕಱ್ಱಿಧಾರೆಯೆಱಿದುಕೊಟ್ಟಗಱ್ದ್ದಿಸಲ ೨
[22]ಆಸಂವತ್ಸರದಲುಸುಂಕವೆಗ್ಗಡೆಮಂಚಿಯಯ್ಯನುದೇವರಮೂತಣಕ್ಕೆಗಾಣ ೧ ಕಂ
[23]ನಾಲ್ಕುಹಣವನೆತೆಱಿಯನೆಕೊಂಣ್ಡುಮೇಲಾದುದಂದೇವರನಂದಾದೀವಿಗೆಯೆಣ್ಣೆಗೆಸಲಿಸಿ
[24]ದಮ್ಮ್ಯಮಂಪ್ರತಿಪಾಳಿಸುವರು ॥ ಇಧಮ್ಮ್ಯವನಾರೊರ್ವ್ವರುಂಪ್ರತಿಪಾಳಿಸಿನಡಸಿದವರಿಗೆ
[25]ಶ್ರೀಗಂಗಾದೇವಿವಾರಣಾಸಿಯಲಿವೇದಪಾರಗರಪ್ಪಬ್ರಾಹ್ಮಣರಿಗೆಸಾಯಿರಕವಿಲೆಯದಾನವಂ
[26]ಮಾಡಿದಫಲವಂಪಡೆವರು ॥ ಇದಮ್ಮ್ಯವನಾವನಾಗಿಯೊರ್ವ್ವಕಿಡಿಸಿಹಿನೆಂದುಮನಕೆತಂದಪಾ
[27]ಪಕಮ್ಮ್ಯಸಪ್ತೋಳುಜನ್ಮಮುಮಘೋರಮಪ್ಪನರಕದಲಿಪ್ಪನು ॥ ಸ್ವದತ್ತಂಪರದತ್ತಂವಾಯೋಹರೇತಿವ
[28]ಸುಂಧರಾಷಷ್ಟಿರ್ವ್ವರ್ಷಸಹಶ್ರಾಣಿವಿಷ್ಠಾಯಾಂಜಾಯತೇಕ್ರಿಮಿ ॥

67

ಅದೇ ಗ್ರಾಮಕ್ಕೆ ಉತ್ತರ ಮೂಮಿಗೆನೆ ಕರಿಯೆನ ಹೊಲದಲ್ಲಿ

[1]ಪಟಣ | [3]ದಿಸೆಟಿಯ | [5]ಸೆಟಿಕಟಿ
[2]ಸಾಮಿಮೂ | [4]ಮಗನಾಗಿ | [6]ಸಿದಕಟಿ

68

ಅದೇ ಹೋಬಳಿ ಕೆರೆಗೋಡಿ ಶಂಕರೇಶ್ವರ ದೇವಸ್ಥಾನದ ಧ್ವಜಸ್ತಂಬದಲ್ಲಿ

[1]ಶುಭಮಸ್ತು ! ಸ್ವಸ್ತಿಶ್ರೀಜಯಾದ್ಭುದಯಶಾ
[2]ಲಿವಾಹನಶಕವರುಶ ೧೫೩೦ ನೆಯವರ್ತಮಾನ
[3]ಕ್ಕೆಸಲುವಕೀಲಕಸಂವತ್ಸರದಶಾವಣಬ ೧೩
[4]ಗುರುವಾರಆದಾರ್ದ್ರನಕ್ಷತ್ರದಲ್ಲುಬೆಸಕಿಯತಿಂ
[5]ಮಪ್ಪನಾಯಕನಮಗಅಣತಿಯತಿರುಮಲಪಾ
[6]ಯಕನುಶಂಕರಲಿಂಗನಶ್ರೀಪಾದಕೆ
[7]ಸಮರ್ಪಿಸಿದದೀಪಮಾಲೆಯಕೆಂಭದಸೇವೆ

69

ಅದೇ ದೇವಸ್ಥಾನದಲ್ಲಿ

[1]ಹರಶಂಕರೇಶ್ವರಸ್ವಾಮಿಯವರೂ ॥
[2]ಶುಭಮಸ್ತು ॥ ಸ್ವಸ್ತಿಶ್ರೀಜಯಾಭ್ಯುದಯಶಾಲಿವಾಹನಶಕವರುಷ ೧೮೯೩ ನೆಯ

[3]ವರ್ತಮಾನಕ್ಕೆ ಸಲುವವಿರೋಧಿಸಂವತ್ಸರದಫಾಲ್ಗುಣ ಬ ೧೩ ಭಾನುವಾರದಲ್ಲೂ
[4]ಕೆರೆಗೋಡಿಶಂಕರೇಶ್ವರಸ್ವಾಮಿಯವರಶ್ರೀಪಾದಕ್ಕೆ ರಂಗಾಪುರದರಂಗಸಾಮಿ
[5]ಯವರಸ್ಥಾನದಲ್ಲಿಯಿದಂಥಾಪರದೇಸಿಐಯ್ಯನವರೂಮೂವತ್ತೈದವರಪದಾರಭ್ಯಾಪಲಾರದ
[6]ನಿಗ್ರಿಯೆತ್ತಿಭಿಕ್ಷಾಲ್ಯುತ್ತಿಯಲ್ಲಿಮಾಡಿಸಿದದೇವಸ್ಥಾನಉಪ್ಪರಿಗೆಬಾಗಲುಮಹಾನಉಮಿಮಂಟಪ
[7]ಕೆರೆಯೆರಡುಸಹಾಸಮರ್ಪಿಸಿದಸೇಮೆಯಿಂಧರ್ಮಸೇವೆಗೆಸಹಾಯವಾದಜನ್ನೆ ರಾಯಪಟ್ಟಣದಸುಬೇದಾರುಗಿರಿಯಪ್ಪೆ ಗ
[8]ಯನವರೂ

70

ಅದೇ ದೇವಸ್ಥಾನದ ಮುಂದೆ ಇರುವ ದೀಪಮಾಲೆ ಕಂಭದಲ್ಲಿ

[1]ಶುಭಮಸ್ತು ಸ್ವಸ್ತಿಶ್ರೀಜಯಾಭ್ಯುದಯ
[2]ಶಾಲಿವಾಹನಸಕವರುಶ ೧೪೯೩ ನೆ
[3]ಯಸಲುವವಿರೋಧಿವಿಕ್ರುತುಸಂವತ್ಸರದ
[4]ಶ್ರಾವಣ ಬ ೩ ಸ್ತಿರವಾರದಲುಬಸವ್ಯೆಯನ
[5]ವರುಆಳುವಲಿಕೆರೆಗೋಡಿಯಗೌಡಗಡಿದ
[6]ತಿಂಮ್ಯೆಯನಮಗತಿಂಮಪಗೌಡನುಕಂ
[7]ಕರ್ಣೇಶ್ವರಸ್ವಮಿಯವರಉತ್ಸಹಮೂರ್ತಿ
[8]ಯದಜೆಂದ್ರಶೇಕರಸ್ವನಿಯವರಶ್ರೀಪಾ
[9]ದಕೆಸವುರ್ಪಿಸಿದದೀಪಮಾಲೆಕಂಬದ
[10]ಸೇವೆಪಾತಳಿಮಂಟಪದಸೇವೆಮಂ
[11]ಗಳಮಃ ಶ್ರೀ ಶ್ರೀ ಶ್ರೀ ॥ ಯಿಸನವ
[12]ಬರದಾತಕೋಟಿಲಿಂಗೈಯ ॥

71

ಅದೇ ದೇವಸ್ಥಾನದ ಚಂದ್ರಶಾಲೆಯ ಕಂಭದ ಮೇಲೆ

[1]ಈದೇವಸ್ತಾನ
[2]ವಾಗುವಾಗಲು
[3]ಳಿಗಾವುಡಿದ
[4]ಅರ್ರಿಳಿಕೆರೆ
[5]ಮುದ್ದಾ

72

ಅದೇ ದೇವಸ್ಥಾನದಲ್ಲಿ

[1]ಶುಭಮಸ್ತು ಶೋಭನಮಸ್ತು ಆಯುರಾರೋ
[2]ಗ್ಯ ಅಯಿಶ್ವರ್ಯ್ಯಮಸ್ತು । ಸ್ವಸ್ತಿಶ್ರೀವಿಜಯಾ
[3]ಭ್ಯುದಯಶಾಲಿವಾಹನಶಕವರುಷಸಾ ೧೪
[4]೯೧ ನೆಯಸಂದನೌಮ್ಯನಾಮಸರವತ್ಸರದಕಾ
[5]ರ್ತಿಕಶು ೪ ಲೂಮ್ಯೆಸೂರದೇವರಾಜವಡೇರೈ
[6]ಯ್ಯನವರುಸುಖರಾಜ್ಯಂಗೈಯ್ತಿರುವಲ್ಲಿಜೆನ್ನಪಟಣ
[7]ದಸೀಮೆತುಂಗಣಿನಾಡಕಾಣಿಕಾ
[8]ರನಹಳ್ಳಿಯಪ್ರಭುರಾಜ್ಯೆಯನವರಕುಮಾ
[9]ರಬಸವ್ಯೆಯನವರಿಗೆಜೆಂನರಾಯಪಟ್ಟಣ
[10]ದಸೀಮೆಯಅತಿಪತ್ಯವನುವಶವಭ್ಯಾಸ
[11]ಮಡಿಯಿದ್ದಲ್ಲಿಭೆಸಗಿಕೆರಗೋಡಿಯನೆಳಉಜೆ
[12]ಂನರಾಯಪಟ್ಟಣದಹವಾಲಾಗಿಯಿದ್ದಲ್ಲಿ
[13]ಕೆರಗೋಡಿಯ್ಯಶಂಕರೇಶ್ವರಸ್ವಾಮಿಯವರ
[14]ದೇವಸ್ಥಾನದಲಿ · ಉತ್ಸವಮೂರ್ತಿಜೆಂದ್ರಶೇ
[15]ಖರಸ್ವಾಮಿಯವರಿಗೆದೇವಸ್ಥಾನವ . . ಕ
[16]ಟ್ಟಿಸ್ತರುಬಲಿಪೀಠವನುಕಟಸ್ತುರು
[17]ಮಂಗಳಮಹಾಶ್ರೀ ಶ್ರೀ ಶ್ರೀ

73

ಅದೇ ಗ್ರಾಮದ ಊರೊಳಗೆ ಈಶ್ವರದೇವಾಲಯದ ದಕ್ಷಿಣದಿಕ್ಕಿನಲ್ಲಿ

[1]ಶುಭಮಸ್ತು . . . . . ನೇವರ್ತಮಾನಕೆಸಲುವವಿಭ
[2]ವನಾಮಸಂ । ವೈಶಾಖದ ೧೦ ಆ। ಹರಶಂಕರೇಶ್ವರಸ್ವಾ

[3]ಮಿಯವರದೇವಸ್ಥಾನದಪೌಳಿಯಲಿಹುಟ್ಟಿಗಲುಯಿಂದೆ
[4]ಯಿದದ್ದರಿಂದುಯಿದೇಗ್ರಾಮಕೆರೆಗೋಡಿಗೌಡತಿರುಮಲ
[5]ದ್ಯೇವರುಸಹಕಲ್ಲುಹೊಡಿಸಿಮಾಡಿದ . . ಪುಣ್ಯ
[6]ಶ್ಯೇವೆಗ್ಗಿಸಾಹಿತ್ಯವಾದಬಿಸಗರಹಳಿಸಂಪಗೌಡರು

74

ಅದೇ ಹೋಬಳಿ ರಂಗಾಪುರದ ದೇವಸ್ಥಾನದ ಮುಂದೆ ಕಂಭದಲ್ಲಿ ಉತ್ತರದಿಕ್ಕು

[1]ಶುಭಮಸ್ತು । ಸ್ವಸ್ತಿಶ್ರೀವಿಜಯವಿಜಯ
[2]ಶಾಲಿವಾಹನಶಕವರುಶಸಾ ೧೬೭೧ ನೆ
[3]ಯವರ್ತಮಾನಕೆಸಲುವವಿಭವಸಂವತ್ಸ
[4]ರದಕಾರ್ತಿಕಶುಧ್ಧ ೫ ಸ್ತಿರವಾರರಂಗನ್ವಾಮಿ
[5]ಯವರಪಾದಕೆರಂಗಾಪುರದಪರದೇಸಿಪ
[6]ಲಾರದನಿಗ್ರಿಯೆತ್ತಿತ್ತಿಭಿಕ್ಷಾವರ್ತಿಯಲ್ಲಿಮಾಡಿಸಮರ್ಪಿಸಿ
[7]ದದೀಪಮಾಲೆಕಂಭಯಿದೇವಸ್ತಾನದಸೇವೆ
[8]ಯಿಪಮರ್ಸೇವೆಗೆಸಹಾಯವಾದಕೆರೆಗೋ
[9]ಡಿಲಿಂಗೇಗಳುಡಶ್ಯಾನಭಾಗದೇವಪ್ಪ । ಶ್ರೀ

75

ಅದೇ ಕಂಭದ ಪಶ್ಚಿಮದಿಕ್ಕು

[1]ಹಿಂದೆಯಿಸೇವೆಯಮಾ
[2]ಡಿದಪರದೇಸಿಯುವ
[3]ರುಮುಂದೆಅವತಾ
[4]ರಯೆತ್ತಿಬಂದುಯಿ
[5]ನ್ವಾಮಿಸೇವೆಗೆಪೋದ
[6]ಗಿದಾರೆ ಶ್ರೀ

76

ಅದೇ ಕಂಭದ ಪೂರ್ವದಿಕ್ಕಿನಲ್ಲಿ

[1]ಯಿನಸ್ವಾಮಿಪ್ರೂಜೆಯಯಿನಪ್ರೂಜಾರಿಗಳಲ್ಲಿಬಾ
[2]ಳುತಪಿದವಳಮಕಳುಮಾಡಲಾಗದುಯಿನಸ್ವಾಮಿ
[3]ಯಹೊಲಮನೆಯಮಾತಯೆತಿಳಿದವರುಜಾತಿವಂತನ್ನಲ್ಲ

77

ಅದೇ ದೇವಸ್ಥಾನಕ್ಕೆ ದಕ್ಷಿಣದಲ್ಲಿರುವ ವೀರಕಲ್ಲು

[1]ನಮಸ್ತುಂಗಶಿರಶ್ಚುಂಬಿಚಂದ್ರಚಾಮರಚಾರವೇತ್ರೈಲೋ
[2]ಕ್ಯನಗರಾರಂಭಮೂಲಸ್ತಂಭಾಯಶಂಭವೇ ॥
[3]ಜಿತೇನಲಭ್ಯತೇಲಕ್ಷ್ಮೀರ್ಮಿತ್ರೇನಾಪಿಸುರಾಂಗನಾ ।
[4]ಕ್ಷಣವಿಧ್ವಂಸನಿಕಾಯಾಕಾಜಿಂತಾಮರಣೇರ
[5]ಣೇ ॥ ಎಂಬೀಮರಿಯಾದೆಯಲುಗೊಟ್ಟಕ್ಕಿಯಹ
[6]ಸ್ವಗ್ಗರ್ಸ್ತನಾದಮಂಗಳಮಹಾ ಶ್ರೀ ಶ್ರೀ ಶ್ರೀ
[7] . ಯಬಡಗಿಚಿಕ್ಕಮಾಳೋಜನಮಗಬಾಬೋಜನುಸ್ವಸ್ತಿ
[8]ಶ್ರೀಜಯಾಭ್ಯುದಯಶ್ಚ ಶಕವರುಷ ೧೭೧೦ ನೆಯಬ್ಯಯ
[9]ಸಂವತ್ಸರದವೈಶಾಖಬ ೧೦ ಬು । ಹೊಂನವಳ್ಳಿಯ .
[10]. . . . . ಂದತಿಯ . . . ಯಿಡೆಯಹಾ . . .

78

ಅದೇ ಹೋಬಳಿ ಕರಡಿ ಗಾ್ರಮದ ಗೋಪಾಲಕೃಷ್ಣ ದೇವಸ್ಥಾನದೊಳಗೆ

[1]ಶ್ರೀನಮಸ್ತುಂಗಸಿರಸ್ತುಂಗಚಂದ್ರಚಾಮರಚಾರವೇ । ತ್ರೈಲೋ
[2]ಕ್ಯನಗರಾರಂಭಮೂಲಸ್ತಂಭಾಯಶಂಭವೇ ॥ ಶುಕ್ಲಾಂಬರಧ
[3]ಧರಂವಿಷ್ಣುಂಶಶಿವರ್ಣ್ಣಂಚತುರ್ಭುಜಂ । ಪ್ರಸಂನವದ
[4]ನಂಧ್ಯಾಯೇತ್ಸರ್ವ್ವವಿಘ್ನೋಪಶಾಂತಯೇ ॥ ಶ್ರೀಗುರುಭ್ಯೋನಮ
[5]ಸ್ಸಸ್ತಿಸಮಸ್ತಭುವನಾಶ್ರಯಂಪೃಥ್ವೀವಲ್ಲಭಂಮಹಾರಾಜಾಧಿ
[6]ರಾಜಂರಾಜಪರಮೇಶ್ವರಂದ್ವಾರಾವತೀಪುರವರಾಧೀ
[7]ಶ್ವರಂಯಾದವಕುಲಾನ್ವಯಂಬರದ್ಯುಮಣಿಸರ್ವ್ವಜ್ಞಂಚೂ
[8]ಡಾಮಣಿಮಲೆರಾಜರಾಜಮಲಪರೊಳುಗಂಡಕದನಪ್ರಚಂಡ
[9]ನೇಕಾಂಗವೀರಸನಿವಾರಸಿದ್ಧಿಗಿರಿದುರ್ಗ್ಗಮಲ್ಲಜಲದಂಕರಾಮನಸಹಾ
[10]ಯಸೌರ್ಯ್ಯನಗರರಾಜ್ಯನಿಮರ್ಮ್ಮಳಜೋಳರಾಜ್ಯಪ್ರತಿಷ್ಠಾಚಾ
[11]ರ್ಯ್ಯರಾಯಗಜಾಂಕುಶಗಂಡಭೇರುಂಡನಿಸಂಕ
[12]ಪ್ರತಾಪಹೋಸಳವೀರಸೋಮೇಶ್ವರದೇವರುದ್ರೋರಸಮುದ್ರದನೆಲವೀ
[13]ಡಿನೊಳುರಾಜ್ಯಂಗೆಯುತ್ತಮಿರೆ ॥ ತತುಪಾದಪದ್ಮೋಪಜೀವಿ ॥ ಅದೆಂ
[14]ತೆಂದಡೆ । ಯೆತ್ತೆತೆಂಬಸಾವಂತರಗಂಡಎತ್ತಿಮರಳುವಸಾ
[15]ವಂತರಗಂಡಮಡವತ್ತಿನಡೆವನಸಾವಂತರಗಂಡತೊಗಿತುತ್ತಿನಿಡುವಂಸಾ
[16]ಂತರಗಂಡಸಾವಂತಜಗದಾಳವುಳೆಯತೊತ್ತಡೆದುಳಿವಮಳೆಗೆಬೆಳ್ಳಾ
[17]ನೆಯಿಡುಗೂರದೇವಿಯಲಬ್ಧಪರಪ್ರಸಾಧಕರಪ್ಪಕರುವಿಡಿಯಮಾರೆಯ
[18]ನಾಯಕನಮಗಮಾರೆಯನಾಯಕನು । ಅದೆಂತೆಂದಡೆ ॥ ಶ್ರೀಮತ್ತ್ಸ
[19]ರ್ವ್ವಾನುಭವಕುಲತಿಲಕಯೋಗೀಂದ್ರಚೂಡಾಮಣಿಶ್ರೀಮತ್ತ್ಸ
[20]ಗುರುಶ್ರೀಧರಸದಾನಂದಪಾದಾಂಭೋಜಭೃಂಗನಪ್ಪಕರುವಿಡಿಯನರ
[21]ಸಿಂಹಸ್ವಾಮಿಗಳು । ಸಕವರ್ಷ ೧೦೪೫ ಶ್ರೀಮತುಖಿನಂದಸಂವತ್ಸರದವೈ
[22]ಶಾಖಶುದ್ಧಏಕಾದಶಿಬುಧವಾರದಂದುಶ್ರೀಗೋಪಾಳದೇವರಪ್ರ
[23]ತಿಷ್ಠೆಯನುಮಾಡಿವಿಷುಳಿಯನಗ್ರಹಣಸಂಕ್ರಮಾಣನಿತ್ಯನೈಮಿತ್ತಿಕಜೀನೆರ್ನ್ನೇ
[24]ದ್ದಾರಅಮಿ್ರತಪಡಿಗೆಮಾರೆಯನಾಯ್ಕನಮಗಮಾರೆಯನಾಯ್ಕ
[25]ನುತಂನಅಭಿವಿ್ರಧ್ಯರ್ತ್ಥವಾಗಿನರಸಿಂಹಸ್ವಾಮಿಗಳಕ್ಕೈಯಲುಧಾರಾ
[26]ಪೂರ್ಬ್ಬಕಂಮಾಡಿಬಿಟ್ಟದತ್ತಿಹಿರಿಯಕೆಱೆಯವೊದಲೇ
[27]ರಿಯಗದ್ದೆಸ ೧। ಕೊ : ೧೦ ಒಡವಿನಗದ್ದೆಕೊ ೧೫ ಮಾವಿನಗದ್ದೆ ·
[28] ೧೫ ಬೆಂನೆಯನಾಯ್ಕನಹಳ್ಳಿಯನಾಯಿಕಿತ್ತಿಯಕೆಱೆಯ
[29]ಹಿಂದೆಗದ್ದೆಸ ೧ ಬೆದ್ದಲುಕೊ ೧೦ ಶ್ರೀಮನುಮಹಾನಾವಂ
[30]ತರಕರಡಿಯಹಾಳಬೂವೆಯನಾಯ್ಕನಮಗದಾಸೆಯನಾಯಕ
[31]ನುಮಂಣ್ಣಹಿಳವೆ ಱದಲೇರಿಯಗದ್ದೆನ[ಳ]ಸಿಂಹಸ್ವಾಮಿಗಳಕಾಲಂತೊ
[32]ಳದುಧಾರಾಪೂರ್ವ್ವಕಂಮಾಡಿಮಾರೆಯನಾಯ್ಕನುಸ್ವ
[33]ರ್ಗ್ಗಸ್ತನಾಗಳೆಂದುಗೋಪಾಳದೇವರಅಮಿ್ರತಪಡಿಗೆಬಿಟ್ಟಗದ್ದೆಕೊ
[34](ಕೊ) ೫ ಬೆದ್ದಲುಕೊ ೩ ಮಾರೆಯನಾಯ್ಕನಮಗಮಾರೆಯನಾ

[35]ಯಕನುಕರುವಿಡಿಯಲ್ಲಿಬಿಟ್ಟಬೆದ್ದಲುಕೊ ೧೦ ಇಧಮ್ಮ್ಯೆಯೆಲ್ಲರಿಗೆಸಮ
[36]ಯಿಂತೀಧಮ್ಮ್ಯವಂಪ್ರತಿಪಾಳಿಸಿದವರುಗಂಗೆಯ
[37]ತಡಿಯಲುಸಹಸ್ರಕವಿಲೆಗಳಿಗೆಸಹಸ್ರಹೊನ್ನಕೊಳ
[38]ಗಂಕಟ್ಟಿಸಿಸಹಸ್ರಬ್ರಾಹ್ಮಣರಿಗೆಕೊಟ್ಟುಸಹಸ್ರಅಗ್ರಹಾ
[39]ರವಂಬಿಟ್ಟಫಲಯಿಂತೀಧಮ್ಮ್ಯಕ್ಕೆಅಳುಪಿದವರುಗಂಗೆಯತ
[40]ಡಿಯಲುಸಹಸ್ರಕವಿಲೆಯನೂಸಹಸ್ರಬ್ರಾಹ್ಮಣರಕೊಂದಪಾಪ ॥
[41]ಸ್ವದತ್ತಾಂಪರದತ್ತಾಂವಾಯೋಹರೇತಿವಸುಂಧರಾಷಷ್ಟಿವರ್ಷಸಹಸ್ರಾಣಿವಿಷ್ಠಾ
[42]ಯಾಂಜಾಯತೇಕ್ರಿಮಿ । ಮಾಡಿದಬೂವಾಚಾರಿಯಮಗಜಕ್ಕೋಜ ॥
[43]ಮತ್ತಂಮಾಕೆಯನಾಯಕಸುಂಡೆಗಟ್ಟಬಲಿಕೊಟ್ಟಗೆದ್ದಿಕೊ ೫
[44] . . ಸಂವತ್ಸರದಪೌ . . ಸು ೧೦ ಮಂ । ಕರುವಿಡಿಯಶ್ರೀಗೋಪಾಳದೇವರಆ . ಮಿ
[45]ತಪಡಿಗೆವ್ಯೂನಂದಾದೀವಿಗೆಗೆವ್ಯೂಹಡಿಹಾಱುಸೋಮಂಣನವರುತಂಮವಿ
[46]ತ್ತಿ . . . . . ಯಹಿಂದಣಪ್ರಥಮದಕಡಹಿನೊಳಗೆಬಿಟ್ಟಗೆದ್ದಿಕೊ ೧೫ . . ಗ
[47] . . . . . ಪ್ರಥಮದಹಸುಗೆವೊಳಗೆಬಿದ್ದಲುಕಂಬ ೫೦ ನುಧಾರಾಪೂರ್ವಕ
[48] . . ಡಿಕೊಟ್ಟರು ॥ ಶ್ರೀ

79

ಅದೇ ಗ್ರಾಮದ ಮಲ್ಲೀಶ್ವರದೇವಸ್ಥಾನದ ಗರ್ಭಾಂಕಣದ ಬಾಗಿಲ ತೊಲೆಯಮೇಲೆ

[1]ತಿರುವಾಡಂಮಾಡಿಸಿದದೇಗುಲಂ ॥

80

ಅದೇ ಬಾಗಿಲ ಗಜಲಕ್ಷ್ಮೀವಿಗ್ರಹದ ಕೆಳಗೆ

[1]ಶ್ರೀಮತುಸರಸ್ವತೀಗಣ . ಲಬಿ . . . | [2]ಮಸ್ತಕ . . ಸೆ . ಕನಮಗ . ಗಲಮಾಡಿಸಿದ

81

ಅದೇ ಗ್ರಾಮದ ಬಲ್ಲೀಶ್ವರದೇವಸ್ಥಾನದ ಮುಂದೆ ವೀರಕಲ್ಲು

[1]ಸ್ವಸ್ತಿ ಶ್ರೀಮನ್ಮಹಾಮಂಡಳೇಶ್ವರಂತ್ರಿಭುವನಮಲ್ಲವಿಷ್ಣು
[2]ವರ್ದ್ಧನಹೊಯ್ಸಳದೇವರುಗಂಗವಾಡಿತೊಂಭತಾಱು
[3]ಪಾಸಿರಮಂಸುಖದಿನಾಳುತ್ತಮಿರೆ . . . . .
[4] . . . . . ನೆಲವಾ . ಕಾಱಿಂಕ . . ಸೆ . . . . . .
[5] . ಗಾವುಂಡನಾಳುವಖೇಡವಱುನಾಸಿರದಲುನಿಗಳವಿಕ್ಕಿಜಯಿ
[6]ಸಿಂಗಾಡುವರನಮುಂದೆಸುರಿಗೆಗಾಳೆಗವಂಕಾದಿಗೆಲುಬಂಮಕ
[7]ರಿವಿಡಿಹಿರೂರಲುಗಾವುಂಡುತನಂಗೆಯ್ಯುತ್ತಮಿರೆಕಕಕಾಲದ
[8]ಂಗಿಕ ನೆಯಜಯಸಂವತ್ಸರದಜೈತ್ರಶುದ್ಧಪಾಡಿವವಡವಾರದಂ
[9]ದುಸೀರೆನಾಡಹಳಿಕಾಱುನಾಯಕರು . . ಬಂದೂತಂಮಾ .
[10]ಯ . ಸೆಮಯ್ಯ್ಯಾದೆಯಿಂತುಱುವಂಪರಿಯಿಸಲುಭು

11ಜಬಳದಿಂತಾನೆಕಾದಿಪಲಱನಿಱುದುತುಱುವಂಮುಗುಳ್ಚಿಸು
12ರಲೋಕಪಾ೨ಪ್ತನಾದ ॥ ಉಱುದಾಂತಪಡೆವರೊಳುತಳ್ತಿಱುದದಟಿಂ
13ಮಗುಳ್ಚಿತುಱುವಂಭುವನಂನೆಱೆಪೋಗಲುತಂನಣಂಮೆಱೆ
14ಯಲುಸುರಪುರಕ್ಕೆಸೆಟ್ಟಗೌಂಡಂಪೋದಂ ॥ ರವೆಯ · ಕೊಂಡು
15ಸೆಕೆಪಡೆದಂಬರತಳದಲ್ಲಿ . ಮೊಳ್ಕಗೆಸುರದುಂದುಬಿಗಳುಕಜ
16ಕ್ಕಹಳಾಳಿಪಿಡಿಯಲುಸಂಬುವಿನೋಲಗಕ್ಕೆಸೆಟ್ಟಗೌಂಡಪೋದ
17ನಾತನತಮ್ಮಂಸಾದಿಗಾವುಂಡಂಶಾಸನಮುಂನಿಱಿಸಿದ

82

ಅದೇ ಗ್ರಾಮದ ಊರಬಾಗಿಲಲ್ಲಿ ಬಲಭಾಗದಗೋಡೆಗೆ ಸೇರಿರುವ ವೀರಕಲ್ಲು

1ಬದ್ದವಣವಱುಗಳಿಂಕಿವಿಸದ್ದಂಗಿಡುಮಿಗಮೆಸೆವ . . ದದಾ . . . .
2ದಿಬದ್ದಿಯಾಗಿಈವಸೇಸೆಗೆಮುದ್ದ . . . . . ಪೆಕ್ಕಲದ . .

83

ಅದೇ ಗ್ರಾಮದ ಚಾವಡಿಮುಂದೆ ಯಿರುವ ಕಲ್ಲು

ನಾಗರಲಿಪಿ

1ಶ್ರೀಗುರುಭ್ಯೋನಮಃ । ಗಣಾಧಿಪತಯೇನಮಃಸ್ವಸ್ತಿಶ್ರೀಜ
2ಯಾಭ್ಯುದಯಸ್ಯಶಕವರ್ಷ ೧೦೫೫ ಶ್ರೀಮುಖಸಂವತ್ಸರದಮಾ
3ರ್ಗಶಿರಶುದ್ಧಪೌರ್ಣಮೆಬುದವಾರದಂದುಸ್ವಸ್ತಿಶ್ರೀಮತ್ಪ್ರತಾಪಚಕ್ರವ
4ರ್ತ್ತಿಹೊಯಿಸಳಶ್ರೀವೀರಬಲ್ಲಾಳದೇವರಸರುಪೃಥ್ವೀರಾಜ್ಯವ
5ಮಾಡುತಿದ್ದಸಮಯದಲಿಶ್ರೀಮನ್ಮಹಾಪ್ರಭು · ತೊಯಸಿಂ
6ಗೆಯದಣ್ನಾಯಕರಅಧಿಕಾರದಲ್ಲಿಅವರಮಕ್ಕಳು
7 . . . ಕೇಶವದೇವಣ್ಣನವರಮುಂತಿಟ್ಟುಶ್ರೀಮದನಾದಿಯಗ್ರಹಾರಂ
8ಹಿರಿಯನರಸಿಂಹಪುರವಾದಕರುವಿಡಿಯಶ್ರೀಮದಶೇಷಮಹಾಜನಂಗ
9ಳುತಂಮೊಳುಸರ್ವ್ವೈಕಮತ್ಯವಾಗಿಒಡಂಬಟುಕುಲಕ್ಕೆಸಮವಾಗಿಮಾ
10ಡಿಕೊಂಬವೆಂದುಮಾಡಿದಸ್ವಸ್ತಿಹೊಯಿಸಳೇಶ್ವರದೇವರಲ್ಲಿಕಲ್ಲಿಟ್ಟುಹಳ್ಳಿ
11ಯೂರಹಿರಿಯೂರತೋಟಗದ್ದೆಬೆದ್ದಲುಒಕ್ಕಲುಮುಂತಾದಎಲ್ಲಾಯಿತಗಳ
12ನುರಾಶಿಮಾಡಿವೃತ್ತಿ ೧೦೫ ಕ್ಕೆಹಂಚ್ಚಿಕೊಂಡಹಸುಗೆಯಕ್ರಮಅಹಳ್ಳಿ
13ಹಿರಿಯೂರತೋಟಗದ್ದೆಬೆದ್ದಲುಮನೆಮುಂತಾದಎಲ್ಲಾಪ್ರಾಪ್ತಿಗಳಿಗೆಸಂಮ
14ತ್ಯಾಗಿಕರಿಯಕೆರೆಯನುಕೇಸವನಾಯಕರಿಗೆಅಖಂಡಿತವಹವೃತ್ತಿ
15 8 । ಕ್ಕೆಕೊಟ್ಟುಹಿರಿಯೂರನೂಕೊಡಲಿಗಟ್ಟವನೂವೃತ್ತಿ ೧೦೦ ||| ಕ್ಕೆ
16ಸಮವಾಗಿಹಂಚ್ಚಿಕೊಂಡುಉಳಿದಹಳ್ಳಿಗಳಿನೂವೃತ್ತಿ ೧೦೦ ||| ಕ್ಕೆ
17ಉಳಿದಹಳ್ಳಿಗಳಿನುಸಮವಾಗಿವತ್ತಕಟ್ಟಿಉಂಡಿಗೆಯನಿಕ್ಕಿಹಂಚ್ಚಿಕೊಂ
18ಡಹಸುಗೆಯಕ್ರಮ ॥ ಲಾಕೆಯಹಳ್ಳಿಇರಿಳಗೆಱೋಕೂಡಿವೃತ್ತಿ
19 ೧೦॥ ಮೆಡಿಲಗವುಡನಹಳ್ಳಿಮಲ್ಲಿಸೆಟ್ಟಿಯಹಳ್ಳಿಗೂಡಿವೃ
20ತ್ತಿ ೯ ಸೆಟ್ಟಿಯಹಳ್ಳಿಕೂಜ್ಜೆಯನಹಳ್ಳಿಗೂಡಿವೃತ್ತಿ ೯ ಮೊದಲಿಯ

[21]ಹಳ್ಳಿಮಸಣಿಸೆಟ್ಟಿಯಹಳ್ಳಿಗೂಡಿವೃತ್ತಿ ೧೨ । ಬಲ್ಲೆಯಕೆಱೆಕೆಳ್ಳ
[22]ಹಳ್ಳಿಗೂಡಿವೃತ್ತಿ ೧೧ ಗಿಣಿಕೆಯಕೆಱೆಉಪ್ಪಿನಮಾಚೆಲಹಳ್ಳಿಗೂಡಿವೃ
[23]ತ್ತಿ ೧೧ ಕೋಟಿಸೆಟ್ಟಿಯಹಳ್ಳಿಕೊಟ್ಟಿಗೆಯಹಳ್ಳಿಗೂಡಿವೃತ್ತಿ ೧೩॥ ಕ
[24]ನಡಿಹಾಳುಚಂದೆಯನಹಳ್ಳಿಮಂಮಯನಹಳ್ಳಿಗೂಡಿವೃತ್ತಿ ೨೦ ಕೋಟೆಯನಾ
[25]ಯಕನಹಳ್ಳಿಮಾಯರಹಳ್ಳಿಗೂಡಿವೃತ್ತಿ ೪॥ ಹೊಂನಗಱುಡನಹಳ್ಳಿ
[26]ಕುಡಿತಕಲ್ಲಹಳ್ಳಿಗೂಡಿವೃತ್ತಿ ೪। ರಾಮಗವುಡನಹಳ್ಳಿಸೀ
[27]ಗೆಯಹಳ್ಳಿಗೂಡಿವೃತ್ತಿ ೪। ಇಂತೀಮರಿಯಾದೆಯಲುನೂರ್ಮಿಪ್ಪ
[28]ತ್ತೈದುವೃತ್ತಿಗೆಹಂಚಿಕೊಂಡಹಸುಗೆಯ್ಯದಧ್ಯವಱಚಂದಾರ್ಕ
[29]ಸ್ಥಾಯಿಇಂದತತ್ತಿನವರುಮತೊಂದುತತ್ತಿನವರನುಸಂಖ್ಯಾ
[30]ಸಮವರ್ಣಸಮವಿಲ್ಲೆಂದುಬಿಡುಸಲ್ಲತಂವೊಳಗೆಅಗ್ರಹಾ
[31]ರಹಂಚ್ಚಿಕೊಂಡುಹಸುಗೆಯಲುಧ್ಯವಱಆಹಳ್ಳಿಗಳಪ್ರಸಿ
[32]ದ್ಧಸೀಮಾಸಂಬಂಧಆಆಹಳ್ಳಿಗಳಿಗೆತೃಣಕಾಷ್ಟ . .
[33]ಪ್ರಚಾರಕ್ಕೆಹೊಲಗೆರೆಕಟಿಲಸಲ್ಲಅಡ್ಡಗಲ್ಲಹ . .
[34]ಯಿಪ್ಪತ್ತುಮುಪ್ಪಾಗಕ್ಕೆಮಧ್ಯಕೆಹಳ್ಳಿಗೆಱೆ ೧೩ೀ ಕ್ಕೆಮಧ್ಯಕೆತಮ
[35]ತಮತತ್ತಿನಲಿಕೆಱೆಯಕಟ್ಟುವರುತೋಟವನಿಕ್ಕುವರುಕೆಱೆಯಕಟ್ಟಿನೀ
[36]ರೊತ್ತಿಡಡೆವಂದುತತ್ತಿನವರುನೀರೊತ್ತಿ . ನಸ್ಲಕೆಱೆಗಳಿಗೆಹ .
[37]ಕೊಳುವಗಲುಪೂರ್ವದಲುನಡಹಮರಿಯಾದೆಯಲಿಬಹವುದೇವದಾನವಾ
[38]ಸ್ಥಾನ . . ಕೊಡಗೆಯಿಂದಬಹಆಯ ೧೩ೀ ಕ್ಕೆಮಧ್ಯಕ । ನಂ
[39]ದಿಗುಡಿಯಿಂದಸೀಮಾಸಂಮಂಧಗಳುತೋಟ . . ಹಡಿ ೧೩೫ ದು
[40]ಕೂಡಿಅನುಭವಿಸುವರುಯಾಶಾಸನ್ನಮರಿಯಾದೆಯನುಆರು
[41]ವಿಱುದವರುಮೂವತ್ತಿತ್ತಾರ್ಸಿರಕೆಹೊಱಗುಗ್ರಾಮದೊಳ್ಗಹ
[42]ರುಗಂಗೆಯತಡಿಯಲುಕಪಿಲೆಯವಧಿಸಿದವರುಇಂತು
[43]ಯಿದಕ್ಕಗ್ರಹಾರದಶೇಷಮಹಾಜನಂಗಳಶ್ರೀಹಸ್ತದೊ
[44]ಪ್ಪಶ್ರೀಗೋಪೀನಾಥ ॥ ಇಂತೀಶಾಸನಮರಿಯಾದೆಯ
[45]ನುಆರುವಿಱಿದಡೆಚಕ್ರವರ್ತ್ತಿಶ್ರೀವೀರಬಲ್ಲಾ
[46]ಳಜೀವರಸರಾಣೆತೊಯಸಿಂಗೆಯದಣ್ಣಾ
[47]ಯಕರಾಣೆಮಂಗಳಮಹಾ ಶ್ರೀ ಶ್ರೀ ಶ್ರೀ

84

ಅದೇ ಗ್ರಾಮದ ಕೆರೆಯ ಏರೀವೀಲೆ ೧ ನೇ ವೀರಕಲ್ಲು

[1]ಸ್ವಸ್ತಿ . . . . ಮಹಾಶ . . . ಸ . . ನ್ತವಿಜಯಲಕ್ಷ್ಮೀಕಾ
[2]ನ್ತ ... ... ನಾ .
[3]ನ್ವಯಂ .....
[4]ದ ... ...
[5] . ನಪ್ರದ ... ...
[6] . ಗತವಜ್ರಪ... ... ... ಚಾಣಾಕ್ಯ ....ಮ . . ಕೊಲಬೆ .
[7] . . . ಂಧಗಂಧ..... ಮಾ... ...ನಾಮಾದಿ

8 . . ವಿಷ್ಣುವರ್ಧ್ಧನ . . . ರಸಿ ..... ಲಕ್ಷ್ಮಾದೇ ... .
9 . . . ಬಾವ ..... ನಾರಸಿಂಹನೃಪಾಳಂ ॥ ವ ॥ ಆಪ್ರತಾಪನ ...
10 . . . ॥ ವೃ ॥ ಸ ... ಕೊಸರಾಗದಿಂ . ನಡೆಯೆಬಮಾ . . ಕೇಳ್ದಂತೆದುಸೆರ . .
11ನೆಕೂರ್ಪ್ಪು ..... ಪೇಳ್ದನ್ತೋಡುವಿ . ಬಿನಂಬುಧಿಬಿಱಿದಾ . .
12 . ತುರಂಗಕಟ್ಟಿಬಂಡಂಮದೋದ್ಧುರಸಾಮನ್ತಲಲಾಮಕ . . . ಯ
13 . . ಳಂಬಾಪ್ಪಜೀಯ . ಯೆನಲ್ ॥ ಕಂ ॥ ಬಂದೋಡು . ಕೆ . . .
14ನ್ದರಗಿರಿಯನ್ತೆಬನ್ದುಕೊಣ್ಡರುಕೆಲದೊಳೆನಿಂದಗರುಡನ ... ...
15ಳಮಿವನೆಂಬಿನೆಗಂ ॥ ವಿ ॥ ಆಗನಿಜಾನ್ತರಂಗಸರಸೀರುಹದೊಳ್ಗಜಚರ್ಮ್ಮ
16ಧಾರಿಯಂನಾಗವಿಭೂಷಣಪ್ರಕರಭೂಷಿತನಂತಳಿದುರ್ವ್ವಿಕಣ್ಗಳುಕಾ . ಂ
17ಕಡಂಗಿಪಾಯ್ದನತಿವೇಗದಿನಿಟ್ಟಯಮೆಳ್ದಯಂಮೇಗೊಗೆದಂಬರಂಬು . . .
18ಗಮುಣ್ಮುವಿನಂರಕ್ತಾಂಬುಗೆಬೋಂಕೆನಲ್ ॥ ಮಸೆದಂಗೋದ್ಭವನಸ್ತ್ರ
19ದನ್ತೆಸೆವದೇವಸ್ತ್ರೀಯರಾನನ್ದದಿಂ(ಹು)ಪೊಸವಂಮುಟ್ಟುನಸೇಸೆ
20ಯಂತಳಿಯೆನಾನಾದೇವತೂರ್ಯ್ಯಸ್ವನಂದೆಸೆಯಂತೆಕ್ಕನೆತೀವಿನರ್ತ್ತಕಿಯರಂ
21 . ತ್ಸಾಹದಿಂಮುಂದೆನರ್ತ್ತಿಸೆಬನ್ದಂದಮರಾವತೀನಗರಿಯಂಪೊಕ್ಕಂಮ
22ಹೋತ್ಸಾಹದಿಂ ॥ ಸಾಮನ್ತಬೆನಯಂಮಾಡಿಸಿದಂ ॥

85

ಅದೇ ಸ್ಥಳದಲ್ಲಿ ೨ ನೇ ವೀರಕಲ್ಲು

... .
6 ..... ಳಾವಗಂ ..... ಗುಣ್ಪಂಶರನಿಧಿ ...
7 . ನಗುಣದಿಂದಮ ..... ರಾಯಂರಿಪುಸಂಹರಣಸಾಮ
8ನ್ತಮಾ ... ... ಕಟ್ಟಿದ .
9 . ಗಕಿಳ ... ... ನೆ . ಸಾನ್ತಗೆ .
10ಶು ... ... ಬಂದ
11ಡಸುವಕಯಿಗೆ ... ... ಕಣ್ಗಿ
12ಡೆವಿಡೆವಿ ... ...
13ಮನೊಳ್ಪನು . . . ನಾತವಿನ್ತಿ ... ... ಪ . . . . . ಡುಮೂಱುನಾ
14ಲ್ಕೆವದೆಂದೆಣಿಸಲ್ ..... ನಿಱಿದಯೆ ... ... ವತುಂಹಿಂದಣ್ಗೆ . ಳೆ .
15ವುಕುಂದದೆಪರಮಾಯುನೆಱಿಮದೆ ..... ॥ ಕೆಡೆಕೆಡೆ
16ಯೆಂದುಚಪ್ಪರಿಸೆಸಾಂತಿಗನೆಯ್ಯೆನೆಜಲ್ದುಬಿಳ್ದುದುಂನಡುಕಳದಲ್ಲಿಬಂದ
17ಡಸಿಮಾಳಯಮಂಪಿಡಿದೊತ್ತಿ . ಪದಿಂಬಡಿದಲಗಿಂದವಂದ
18ರಿದುಪಣ್ದಲೆಯಂರಣರಂಗಭೈರವಂಕಡುಗಲಿತಂದುವ . . ರಳಿಪಿದವಿಳಯ
19ಕರನಂತೆರಾಯಣಂ ॥ ವೃ ॥ ವಿಸಮದೆಪಾಡೆಕಿಂನರಿಯರಾಲಿಸಿರಾಯ
20ನವೀರದೆಳೆಯಂಕುಸುಮಸರಂಗಳುರ್ಚ್ಚೆಮನಮಂವಿರಹಾನಳತಾಪದಿಂಕರಂಬೆ
21ಸವಳಿದಿರ್ದ್ದಡರ್ಗಣಕಾನಿವಹಂಮಸೆಮುಟ್ಟಿತೆಂಬುದೊಂದೆಸೆವಸವಾ
22ತೆಗೆಳ್ದುಪರಿತಂದಳೆದುಯ್ದರತಿಪ್ರಮೋದದಿಂ ॥

86

ಅದೇ ಹೋಬಳಿ ಕೋಟೆನಾಯಕನಹಳ್ಳಿ ಬನಶಂಕರಿಯಮ್ಮನ ದೇವಸ್ಥಾನದ ಪ್ರಾಕಾರದಲ್ಲಿ

[1]ಶುಕ್ಲ ಸಂವತ್ಸರದಜ್ಯೇಷ್ಟಶು ೫ ಲು ಶ್ರೀಮತುಸಟಿಗೆಯ . . . .
[2]ಹಿಲೇಬಾಗೂರಹೊಟ್ಟಿಂಮಸೆಟಿಬಾಗೂರಮಲ್ಲಿಸೆಟ . . .
[3]ಮಲಿಸೆಟಿಜಟಿಲಕನಜೋಡಂಮಸೆಟಿಜೆಂಗಿಸೆಟಿನರು ...
[4]ಹೊಂನವಳಿಯಸೂರಿಸೆಟಿನಾದಲಿಕಂಚಿಸೆಟಿಅಂಬರವೊಡೆ ...
[5]ಮಲಿಸೆಟಿತಿಪಿಸೆಟಿಹೆಂಚುರಸೊ ... .
[6]ಕನ ... ...
[7]ಸೆಟಿ ... ...
[8]ವೆಂತೆಂದಡೆಬಾಳುತಪಿದಹೆಣ್ಣುಗಳಿಗೆಆಹೆಂಣುಗಂಡನು . . . .
[9]ದರೆಕಸಬು . . . . . ಮಗ . . . . . ಕೊಂಡುಗಂಡನಮ
[10]ನೆಯಉಂಟುಮಾಡಾನುಅಂದರೆಆಹೆಂಣು . . . . . ಅಮರಿಯಾದಿಯಲಿಯಿರಿ
[11]ಸುವದೊಆಹೆಂಣುಯಿಷ್ಟಕುವೊಲನುಅಂದರೆ... ...
[12]ಮನೆಯಮಾಡಬೇಕಾದರೆ . . ವರೆವರಹ . . . ನಾಲುವತ್ತ್ರುವರಹವ . ಲೆಕಟ್ಟದ . .
[13]ಕುಲದ . . ದೊಳಗೆಅಂತಸಕ್ಷಿತಪ್ಪಿದವರಿಗೆಕುಲಕೆಹಂನೆರಡುವರಹಆ . .
[14] . ಕುವರಹೆನತೆರೆವ್ರುಕೊಡಲೊಪ್ಪಿದುವೊಲ್ಲೆನುಅಂದರೆಹರಿಸ
[15] . . ಡಕಹೆ ೂಱಗುಪಂತಿಸಂಕರಕೆಹೊಱಗುರಾಮರಾಜಯಂತಿಮಾಡಿದಡೆ
[16] . . . ಯೆಂಬತ್ತ್ರುವರಹಮಿದಕೆತಪ್ಪಿದವರುಹರಿಸಮಯ . .
[17] . . . ಲಾಗದರ್ಮಮಾ . . . . . ಭಕ್ತರು

87

ಅದೇ ಗುಡೀ ಮುಂದೆ

[1]ರಾಮೇಲಿಂಗ . . .	[3]ಪಮಮರದಕುಕುಲಕ	[5]ಣವಿಲ
[2]ರವಂಗದೊರುಯುರುಮಾಡು	[4]ರದಮರು . . ರಸಿಗಕರು	

88

ಅದೇ ಗ್ರಾಮದ ಈಶ್ವರದೇವಸ್ಥಾನದ ಮುಂದೆ ಕಂಭದಲ್ಲಿ

[1]ರಾಜಯನ	[3]ರಾಜಟಲಿಂಗೈಯಯ್ಯಾ	[5]ಯುವೈಯನಬೀರ
[2]ಣ . ರಗ . . ದಲು	[4]ಯರದೆಯವೈ	[6]ಸೊಂಬಯಸೇವೆಮು .

89

ಅದೇ ಗ್ರಾಮಕ್ಕೆ ಪೂರ್ವ ಕಲ್ಲೂರುಬಂದಮ್ಮನ ಹೊಲದಲ್ಲಿ

[1]ಸಿದಾರ್ತಿಸಂವ		[3]ಬಿರಾಡದೊ
[2]ಅಶ್ವೀಜ ಬ ೩ ಲು		[4]ಡಪೈಯ

90

ಅದೇ ಹೋಬಳಿ ಬೇಲಚಿರಾಖ[1] ಚನಪಟನಹಳ್ಳಿ ಆಲದಮರದ ಕೆಳಗೆ

... ...
[4]ರಾಯದೇವಮಹಾರಾಯರವರು . ದ . .
[5]ಸಿಂಹಾಸನರೂಢರಾಗಿಪ್ರತುವೀಶಾಂಬ್ರಜ್ಯಂಗೆಯು .
[6] .. ಲುಕೋಟಿನಾಯಕ ... ...
[7]... ಉಲ ... ಯಣತಿನಾಯಕ ...
[8] . . ದಿಯಯಿರನಾಯಕರಗ್ರ ... .
[9]. ದಿತತನಗಾ್ರ ... ...
[10]... ರಾಯ ...ದಮ ...
[11] . ಗಾ್ರಮದ . ಕ್ಕೆಪಾಲಿಸಿದ ... ...
[12]. . . ಶಂಕರಿದೇ... ... ...
... ...
[17] ... ಸ್ವಾಮ್ಯವನೂ ...
[18] ... . ದಲಾಗಿ... ...
[19] ... ಕೋಟಿನಾಯಕನ ... ...
[20] ... ಗೋತ್ರದಯೆರ ... ನಾಯಕರ . . . .
[21] ...ಯಿಂಮಡಿಬಯಹನಾಯಕರಿಗೆತ್ರಿಕರಣಶುದ್ಧವಾ
ಗಿನಾ .
[22] ... ದೇವನಗಾ್ರಮ . .
[23] . . . . . .
[24] ದಾನಪಾಲನಯೋರ್ಮಧ್ಯೇದಾನಛ್ರೇಯೋನುಪಾ
ಲನಂ
[25]ದಾನತ್ಸ್ವರ್ಗಮವಾಪ್ನೋತಿಪಾಲನಾದಚ್ಯುತಂಪದಂ
[26] ... ರಾಜೇಂದ್ರಾ । ಸರ್ವ . . . . . .
[27]... ... ...
[28]ಸುಂದರ । ಷಷ್ಟಿರ್ವರ್ಷಸಹಸ್ರಾಣಿವಿಷ್ಠಾಯಾಂಜಾ
ಯತೇ
[29]ಕ್ರಮಿಶಿ್ರ . . . . . .

91

ಅದೇ ಹೋಬಳಿ ಕರಡಾಳುಗಾ್ರಮದ ಈಶ್ವರದೇವಸ್ಥಾನದಬಳಿ

[1]ನಮಸ್ತುಂಗಶಿರಸ್ತುಂಗಚಂದ್ರಚಾಮರಚಾರವೇತ್ರೈಲೋಕ್ಯನಗರಾರಂಭ . .
[2] . ಮೂಲಸ್ತಂಬಾಯಸಂಬವೇ । ಸ್ವಸ್ತಿಸಮಧಿಗತಪಂಚಮಹಾ
[3]ಸಬ್ದಮಹಾಮಂಡಲೇಶ್ವರದ್ವಾರಾವತೀಪುರವರಾಧೀಶ್ವರ
[4]ಯಾದವಕುಳಾಂಬರಸಂಮ್ಯುಕ್ತಚೂಡಾಮಣಿಮಂಡಳಿಕಚೂಡಾಮ
[5]ಣಿಯದುಕುಳಕಳಿತನಿ್ರಪಕುಳಹಮ್ಯರ್ಮ್ಯಮೂಲಸ್ತಂಬನಪ್ರತಿ
[6]ಹಿತವಿಜಿತವಿಜಯೂ . . ಶಷಕಪುರನಿವಾಸವಾಸಂತಿಕಾದೇ
[7]ವೀಲುದ್ಭವರಪ್ರಸಾದಶಿ್ರಮನು . . . . . .
[8]ಗ್ರಗಿರದುರ್ಗ್ಗ . . . . . ಗ್ರಮಂಡಳಿಕಬೀ
[9]ಟಿಕಾಱಸಹಜದಲು . . ಸಮ . . . ಮು . ಪ್ರಸಂನ
[10]ಗಿರಿದುರ್ಗ್ಗಮಲಂಸನಿವಾರಸಿದ್ಧಿ ಅಸಹಾಯಶೌರ್ಯ್ಯಶಿ್ರಮನ್ಮಹಾ
[11]ಮಂಡಳೇಶ್ವರತಿ್ರಭುವನಮಲ್ಲಅರಿಭೂಪಾಲಹೃದಯಸೆಲಬಪ್ಪನೆಂ
[12]ಕಕಾಱಜಲದಂಕರಾಮ . . . . ವಿಷ್ಣುವರ್ದ್ಧನಬಿಟ್ಟಿ
[13]ದೇವನಸೂನುನಾರಸಿಂಹದೇವನವುತ್ರಗಿರಿದುರ್ಗ್ಗಮಲ್ಲಅರಿಮಂ
[14]ಡಳಿಕಹ್ರಿದಯಸೆಲ್ಲಶಿ್ರಮನ್ಮಹಾಮಂಡಳೇಶ್ವರಬಲ್ಲಾಳದೇವದೋರ
[15]ಸಮುದ್ರದನೆಲವೀಡಿನಲುಸುಖಸಂಕಥಾವಿನೋದದಿಂಪ್ರತ್ವೀರಾ
[16]ಜ್ಯಂಗೆಯ್ಯುತ್ತಿರೆ ॥ ತತುಪಾದೋಪಜೀವಿಸಾಮಂತಚೂಡಾಮಣಿಮಲೆ
[17]ಯತೊತ್ತಳದುಳಿವಮಲೆಗೆಬೆಳ್ಳಾನೆಮಲಪರೊಳುಗಂಡನುಡಿದಂತೆ

18ಗಂಡಪಡಿಮೆಚ್ಚಿಗಂಡಯಾದವಕಟಕರಕ್ಷಪಾಳ . . . ಕಟ್ಟಿತೋಳಬೀ
19ಸುವನಾವಂನ್ತರಗಂಡನಂನಿಗರಬಿರುದೆಂಬನಾಮಂತರಗಂಡಹೋಸಣನಂ
20ನಿಯಚಾರದಲಿಪ್ಪೊಕ್ಕುಹೊಱವಡುವಶಾಮನ್ತರಗಂಡಮುಂದೆ . ಯಹಿಂತೆ
21ತುಱುಬುಳ್ಳನಾಮಂನ್ತರಗಂಡಇಡುಗೂರಪುರವರಾಧೀಸ್ವರಶ್ರೀಮನ್ಮಹನಾಮ .
22ನ್ತಹುಣಿಸಯ್ಯನಾಯಕರಪುತ್ರಗೋತ್ರಪವಿತ್ರಪರಾಂಗನಾಪುತ್ರಶ್ರೀಮನ್ಮಹಾನಾ
23ಮಂನ್ತದಾಸಯ್ಯನಾಯಕರಸೂನುಮಹಾನಾಮನ್ತಮಾಚಯ್ಯನಾಯಕರು
24ಅರಿನಾಮಂನ್ತವೆಬಸರ್ಪಬಿರುದನಾಮಂನ್ತಬೇರುಂಡ . . ನಾಮನ್ತಹಿದಿಯಳೆಲ್ಲ
25ಸೊಬ್ಬಯ್ಯನಾಯಕನನುಜಮಹಾನಾಮನ್ತನಾರ್ದ್ಧಳಸರಭಭೇರುಂಡಕಪನಪ್ರಚಂ
26ಡಮಹಾನಾಮಂನ್ತಚತುರ್ಮ್ಮಕಮಹಾನಾಮಂತಬೂವೆಯ್ಯನಾಯಕರುಸುಕಸಂ
27ಕತಾವಿನೋದದಿಂಕರಡಿಹಾಳಲುಪ್ಪಿತ್ತೀರಾಜ್ಯಂಗೆಯ್ಯುತ್ತಿರೆ ॥ ಸೊಬ್ಬೀಸ್ವರದೇವಗ್ಗೆರಾಜೇ
28ಸ್ವರದೇವಗ್ಗೆಬಮ್ಮೀಸ್ವರದೇವಗ್ಗೆ . . ಸ್ವರದೇವಗ್ಗೆಯಿಂತೀನಾಲ್ಕುದೇವಾಲಯಕೆಸಕವ
29ರಿಸನಾಸಿರದತೊಂಭತೊಂಭತ್ತನೇವಿರೋಧಿಸಂವತ್ಸರದಜ್ಯೈತ್ರಸುದ್ಧಬಿದಿಗೆಆದಿವಾರದಂದು
30ಆದೇವರಿಂಗಂಅಲ್ಲಿಅಚಯ್ಯಸ್ವಸ್ತಿಯಮನಿಯಮನಿಷ್ಠಾಧ್ಯಾಯಧ್ಯಾನದಾರುಣಮೋನಾನುಷ್ಠಾಣಜ
31ಪಸಮಾದಿ . . . ನಾಸ್ತ್ರನಾರದಾದೇವೀಲುಬ್ಧವರಪ್ರಸಾದಶ್ರೀಮದಾಚಾಯ್ಯಕಾಳಾಮುಖಿಕುವ
32ಳಯಬಾನ್ಧವಬನವಾಸೆನಾಡಕೆಱುವಡೆಯಬಂಮಜೀಯರಮಗಂ[ಗಂ]ಗರಾಸಿಜೀ
33ಯಂಗೆಱುತ್ತರಾಯಣಸಂಕ್ರಮಣವ್ವೆತೀಪಾತದಂದುಎತ್ತಿಲಕುಳೋದ್ಯವಬಯಳಿವಾಡಿ
34. ಸಯ್ಯನಾಯಕರು . ಮೈಯ್ಯನಾಯಕರುಬಾವಯ್ಯನಾಯಕರು . ಕಾಲಂಕಚ್ಚಿ
35ಧಾರಾಪೂರ್ವ್ವಕಂಮಾಡಿಬಿಟ್ಟೆದತ್ತಿ ಎಂತೆಂದಡೆಮಂನ್ನ ಬಾಳಹಿರಿಯಕೆಱೆಯನಡು
36ಬಯಲಅರಳಿಯಿಂದಬಡಗಕಲಕಡಹುಸಲಗೆಎರಡುಆಕಡಹಿಂದೆತೆಂಕತಾಱು
37 . . ಡಹಸಲಗೆಎರಡುಕೊಳಗಹತ್ತುಆಕಡಹಿಂದತೆಂಕಹುಸಿಯಕಡಹುಸ
38ಲಗೆಮೂಱುಆಕಡಹಿಂದತೆಂಕಬೋಕೇಶ್ವರದೇವಗ್ಗೆಹುಣಿಸಯ್ಯಬಿಟ್ಟೆಸಲಗೆಬಂದುಱಿಂತ
39ಮನಬಾಳಬಯಲಸ ೪ ಕೊ ೧೦ ಊರಮುಂದಣಕೆಱೆಯತೆಂಕಕರಿಯಕೆಱೆಯಮೊದಲೇರಿ .
40ಯಬೆದ್ದಲೆಮತ್ತಲುಮೂಱುಊರಿಂದಬಡಗಬಯಲಬಳಿಯಬೆದ್ದಲೆಕೊಳಗಹತ್ತುದೇ
41ವರದೀವಿಗೆಗೆಕಯಿಗಾಣಮಹಾನಾಮನ್ತಬೂವಯ್ಯನಮಾವಬಂಮೆಯನಾಯಕ
42ತಂನಹಳಿಯದೇವಾಲಿಯಮಾಡಿಬಿಟ್ಟೆದತ್ತಿ ಮೊದಲೇಱೆಯಗದ್ದೆಸಲಗೆಮೂಱುಬೆದ್ದಲೆ .
43. ಱೆಯಮುಂದಣಕೋಡಿಸ ೧ ಯಿಂತೀಧರ್ಮ್ಮಮಂನಡಿಸಿದವರುಗಂಗೆಯತಡಿ
44ಯನಾಸಿರಬ್ರಹ್ಮಣರಿಗೆನಾಸಿರಕವಿಲೆಯದಾನಮಾಡಿದಫಲಯೀಧರ್ಮವಕೆದಿಸಿ
45ದರಿಗೆಗಂಗೆಯತಡಿಯನಾಸಿರಬ್ರಹ್ಮಣರನಾಸಿರಕವಿಲೆಯಕೊಂದದೋಸಸ್ವದತ್ತಂ
46ಪರದತ್ತಂವಾಯೋಹರೇತುವಸುಂಧರಾಷಷ್ಟಿವರಿಷಸಹಸ್ರಾಣಂಯಿಷ್ಟ್ವ .
47ಜಾಯತೇಕ್ರಿಮಿ ॥ ಕರಡಿಹಾಳಮೂಲಸ್ತಾನದಗಂಗರಾಸಿಯಮಗಂಬಿಂ .
48ಬಿಯನಬರಪಮಲಿಯೋಜನಮಗರೂವಾರಿಬಂಮೋಜಹೊಯಿದಲಕ್ಷೆ .

92

ಅದೇ ದೇವಸ್ಥಾನದಬಳಿ ವೀರಕಲ್ಲು

1ನಮಸ್ತುಂಗಸಿರಸ್ತುಂಗಚಂದ್ರಚಾಮರಚಾರವೇತ್ರಜ
2ಳೋಕ್ಯನಗರಾರಂಭಸ್ವಯಂಮೂಲಸ್ತಂಭಸಂಭವಿತ
3ಕ್ರಿತೆಯ . . ನಿಯನಾಯ
4ಕನತಂಮ . . ಎತ್ತಿಸಿದಕಲ್ಲು

[5]ಸ್ವಸ್ತಿ ಸಮಸ್ತಭ್ಯುದಯಕವರುಷ ೧೩೦೧ ನೆಯಸಿದ್ಧಾರ್ತ್ಥಸಂ
[6]ವತ್ಸರದಲಶ್ವಯುಜಸು ೧೫ ಸೋ । ದಂದುಮಲೆರಾಜರಾಜಮಲಪರೊ
[7]ಳುಗಂಡರಾಯಹುಲಿರಾಯಗಂಡಬೀರುಂಡಶ್ರೀವೀರನಾರಶಿಂ
[8]ಹದೇವನಕುಮಾರಶ್ರೀವೀರಬಲ್ಲಾಳದೇವರ್ಸರುಪಿತ್ವೀರಾಜ್ಯಂಗೆ
[9]ಯ್ಯುತ್ತಿರೆ ॥ ತತುಪಾದೋಪಜೀನಿಶಾಮಂತಚೂಡಾಮಣಿಮಲೆಯ
[10]ತೊತ್ತಳದುಳಿವಮಲೆಗೆಬೆಳ್ಳಾನೆಮಲಪರೊಳುಗಂಡನುಡಿದಂ
[11]ತೆಗಂಡಪಡಿಮೆಚ್ಚೆಗಂಡಯಾದವಕಟಕರಕ್ಷಪಾಳಕಲಡುಗೂರು
[12]ಪ್ರಭವರಾಧೀಶ್ವರಕರಡಿಹಾಳದೆಮು . . ನಾಯ್ಕನಮಗಕೆರಯನಾ
[13]ಯ್ಕನು . ರಕಕಾನಮಲ್ಲಿ . ಕವರುಣಸ . . ಕೆಹತ್ತಿಬಿಟ್ಟಲ್ಲಿಕಾದಿ
[14]ಕೊಡವಯದಿಂ . . ಬಿದ್ದುಶ್ವರ್ಗ್ಗಸ್ತನಾದ ॥ ಕಲಕಳಿತಾಳಬೆಸೆ
[15]ದವನಾವಂತರಗಂಡನಿನಗೆ . . ಬಿರುದಿಂನಾಮಂತರಗಂಡ ॥

98.

ಅದೇ ಗಾ)ಮದ ಪಾಳುಬಸ್ತೀವಳಗೆ ಬಿದ್ದಿರುವ ಕಂಭದಲ್ಲಿ

(ಮುಂಭಾಗ)

[1]ಅನುಪಮಪುಣ್ಯಭಾಜನೆಜಿನೇಂದ್ರಪದಾಬ್ಜವಿಲೀನಚಿ
[2]ತ್ತೆ ಪವನಶುಚರಿತ್ರೆಹಯ್ರ್ಯಲೆಮಹಾಸತಿ
[3]ತನ್ನವನಾನಕಾಲದೊಳುಮನುಜಮನೋ
[4]ಜನಂಕರೆದುಬೂವಯನಾಯಕಕೆಮ್ಮಗೆ
[5]ನ್ನನಿಂಕನಸಿನೊಳಪ್ಪಡಂನೆನೆಯದಿನ್ನೆನೆನಾಶ್ವತ
[6]ಮಪ್ಪಧರ್ಮ್ಮಮಂ ॥ ಧರ್ಮ್ಮಮನಾಗಳುಂಮು
[7]ದದೆಮಾಳ್ಪುದುಮಾಡಿದೊಡೆಪ್ಪುದಾವುದಾ
[8]ಧರ್ಮ್ಮದಿನೆಂಬಿಯಪ್ಪೊಡೆಸುರೇಂದ್ರನರೇಂ
[9]ದ್ರಫಣೀಂದ್ರರಾಜ್ಯಮಂತೊಮ್ಮೊದಲಪ್ಪು
[10]ದಾಗಿಕಡೆಯೊಳೆವರಮುಕ್ತಿಯನೀವುದ
[11]ನ್ತಱಂಧರ್ಮ್ಮದನಾಗುಸತ್ಯನಿಧಿಬೂವಯನಾ
[12]ಯಕಬೇಡಿಕೊಂಡೆನಾಂ । ಎನಗನುವೋದನವು
[13]ಣ್ಯಂನಿನಗಂನಿಸ್ಸೀಮಮಪ್ಪಪುಣ್ಯಂನಾಗ್ಗಂಮನವೊಸೆ
[14]ದುಮಾಡಿಸೊಂದಂಜಿನಗೃಹಮಂಬೂಳಿ
[15]ಜೀವಧರ್ಮಧುರೀಣಾ । ಎಂದೆಂದಳೆನ್ನದೇವರನೆಂಟಂ
[16]ಗಂನೀನೆಪೂಜಿಸಿಚಿಕ್ಕಯನಂಕುಂದಿಕಱಿಗಂದದನಾ
[17]ನ್ತಂದದೆರಕ್ಷಿಪುದುಪೇಕ್ಷೆಸೆಯ್ದೊಡೆದೋಷಂ ॥ ತದನ
[18]ನ್ತರಮಭಿಷವಮಂಮುದದಿಜಿನಪತಿಗಮಾ
[19]ಡಿಗನ್ಧೋದಕಮಸದಮಳಚರಿತ್ರಕೊಂಡಳ್ಬೆದಱಿಪೆ
[20]ನಳಬಲಮನೆಂಬಿಮನದುತ್ಸವದಿಂ ॥ ತೊಟ್ಟಿದು
[21]ಜಿನೇಂದ್ರಚಂದ್ರಪದಸನ್ನಿಧಿಯೊಳ್ಪದಪಂಚಕಂ
[22]ಗಳಂಮಱಿಯದೆಭೋರೆನುಚ್ಚರಿಸುತುಂನೆಱೆ

[23]ಸುತ್ತಿದಮೋಹಪಾಶಮಂಪಱಿಮಜಗಜ್ಜನಂ
[24]ಪೊಗಳೆಹರ್ಯ್ಯಲೆನಾರಿಸಮನ್ತುಸೈಯ್ಪುಕ
[25]ಣ್ದಱಿದವೊಲೇಂಸಮಾಧಿವಿಧಿಯಿಂದಿರದೆ
[26]ಯ್ದದಳಿಂದ್ರಲೋಕಮಂ ॥ ಬರವಂಕೇಳ್ದಮರಾವ
[27]ತೀಪುರದದೇವೀಸಂಕುಳಂಬಂದುನೂ
[28]ಪುರಮಂಮುತ್ತಿನಹಾರಮಂಕಟಕಮಂಕೇ
[29]ಯೂರಮಂವಜ್ರದುಂಗುರಮಂಮಾಣಿಕದೋ
[30]ಲೆಯಂತುಡಿಸಿಬೇಗಂದೇವಿನೀನೆಱುರಾಗರಸಂಕೇ
[31]ಮಿಗಲೀವಿಮಾನಮನೆನುತ್ತಂತಂದವರ್ಸ್ಸಾರ್ಚ್ಚಿದ
[32]ರು ॥ ಏಱುವಿಮಾನಮಂಬರೆಸುರಾಂಗನೆಯ
[33]ರ್ನ್ನಳಿತೊ[ಳ]ನುಣ್ಬೊಗತ್ತೋರ್ಱುವಿನಂಮಹೋ
ತ್ಸವದೆಸೇ
[34]ಸೆಯನಿಕ್ಕೆಸುರಾನಕಸ್ವನಂಮೀಱಿಘನಾ
[35]ಘನಧ್ವನಿಯನೆತ್ತಿದಸತ್ತಿಗೆಚಂದ್ರಬಿಂಬಮಂ
[36]ಬೀಱಿವಿಳಾಸದಿಂಬಿಡಿದುಚಾಮರಮಿ
[37]ಕ್ಕಿಸಮಂತುಪೊಕ್ಕಳಾನೀಱಿಮಹಾನುಭಾವೆ
[38]ಸತಿಹರ್ಯ್ಯಲದೇವಿಸುರೇಂದ್ರಲೋಕಮಂ ॥

94

ಅದೇ ಕಂಭದಲ್ಲಿ

ಹಿಂಭಾಗ

[1]ಶ್ರೀಚಾಂದ್ರಾಯಣದೇವರ . . . ಹರಿಹರದೇವಿ ॥
[2]ಸತಪತ್ರಬ್ರಜದಿಂಸರೋವರಕುಲಂಮೇರುಪ್ರಕೂಟ
[3]ಪ್ರಭೋನ್ನತಿಯಿಂದದ್ರಿಚೆಯಿಂಮದೇಭಷಟೆಯಿಂಸೈನ್ಯಾ
[4]ಳಿಸನ್ಮಾರ್ಗ್ಗಸತ್ಕ್ರಿತಕಾವ್ಯನಿಬಂಧಮೆಂತೆಸಗುಮಿಂ
[5]ತೀಲೋಕದೊಳುಲೋಕಸುಸ್ತುತಚಾಂದ್ರಾಯಣದೇ
[6]ವರಿಂದೆಸೆಗುವೀಶ್ರೀಕೊಂದಕುಂದಾನ್ವಯಂ
[7]ಎಸೆವಬುಧಾಳಿಗಾಶ್ರಿತಜನಕ್ಕನುರಾಗದೊಳಿ
[8]ತ್ತುಮತ್ತವಾದರಿಸುವದಾನದಿಂದೆಸುರಭೂ
[9]ಜಮನೇಳಿಪಳೆಂದೆಬಣ್ನಿಕುಂಪರಮಜಿನೇಂದ್ರಪಾ
[10]ದಕಮಳಾರ್ಚ್ಚನನಿರ್ಭ್ಭರಭಕ್ತಿಯುಕ್ತೆಯಂ
[11]ಹರಿಹರದೇವಿಯಂನೆಗಳ್ದಶಾಸನದೇವಿಯನೀಧರಾ
[12]ತಳ । ವರಜಯ(ಸೌ)ವತ್ಸರಂವಿನುತಜೇಷ್ಟ
[13]ಯುತಂಸಿತಪಕ್ಷಮಷ್ಟಮೀಪರಿಗತಮನ್ದವಾರದೊ
[14]ಳನಿನ್ದಿತಪಂಚಪದಂಗಳಂಸುಖೋತ್ಕರನಿಳಯಂ
[15]ಗಳಂನೆಱಿಯೆತಂನೊಳೆಭಂಗಿಸುತುಂಸಮಾಧಿಯಿಂ
[16]ಹರಿಹರದೇವಿವಿಸ್ವವಿಬುಧಸ್ತುತೆಯೆಯ್ದಿದ(ಳಿ)
[17]ಳಿಂನ್ದ್ರಲೋಕಮಂ ॥ ನಿರುಪಮೆಯಂಚರಿತ್ರಯು
[18]ತೆಯಂವನಿತಾಜನರತ್ನೆಯಂಮನೋಹ
[19]ರಜನಮಾರ್ಗ್ಗವಾರಿನಿಧಿಚನ್ದ್ರಿಕೆಯಂ
[20]ಸುಕ್ರಿತೇಕಪುಂಜೆಯಂಪರಹಿತಚಿತ್ತೆಯಂ
[21]ಬಗೆಯದನ್ತಕನೆಂಬದುರಾತ್ಮನೊಯ್ದನೀ
[22]ಹರಿಹರದೇವಿಯಂವಿಬುಧವಂದಿತೆಯಂ
[23]ಭುವನಾಭಿರಾಮೆಯಂ ॥ ಜಿನೇಸ್ವರ
[24]ನಮೋವೀತರಾಗಾಯಶಾನ್ತಯೇನಮೋಸ್ತು ॥

95

ಅದೇ ಹೋಬಳಿ ಈರನಕಾವಲು ಗುಡ್ಡದಲ್ಲಿ

ಹರಿಯೋಜದೇವರಾಜ

96

ಅದೇ ಹೋಬಳಿ ಶೆಟ್ಟಿಹೆಳ್ಳಿಯ ಕೆರೇ ಬಳಗೆ ಮೈಲಾರ ದೇವರ ಗುಡೀ ಮುಂದೆ ನಟ್ಟ ಕಲ್ಲು

[1]ಶ್ರಿಅಕ್ಷಯಸಂವತ್ಸರದಮಾಘಸುದ · ದಿಗೆಸೋಮ · ·
[2] . . . ನಲುಮಾರಸೆಟ್ಟಿಯಮಗರಳಿಸೆಟ್ಟಿಘ · ·
[3]ವನಹರಬಳಿಯಮಳ್ಳದಱಿಯಮರದಲಿರಳಿಸೆಟ್ಟಿ
[4] . . ರಱ · ಕಟ್ಟಿಸತ್ತಡೆಅವರಅಣ್ಣಮಯಸೆಟ್ಟಿತಂ
[5]ನ್ನ · · ರಳಿಸೆಟ್ಟಿಗೆಮಾಡಿಸಿದಬೀರಗಲುಮಂಗಳಮಹಾ

97

ಅದೇ ಗ್ರಾಮದಲ್ಲಿ ಆಂಜನೇಯ ದೇವಸ್ಥಾನದ ಮುಂದೆ ಇರುವ ಕಲ್ಲು

[1]ಶ್ರೀಬಡಗರೆಯನಾಲ್ಗಿವುಣ್ಡಸಾಂನ್ತಿವರ್ಮ್ಮನ . . . .
[2]ಡನಕಲ್ಲು

98

ಅದೇ ಹೋಬಳಿ ಕೊಂಡ್ಲಿಘಟ್ಟದ ಗ್ರಾಮಕ್ಕೆ ಪೂರ್ವ ಮೇಲಸಕ್ಕರೆ ದೇವಂಣನ ಹೊಲದಲ್ಲಿ ಇರುವ ವೀರಕಲ್ಲು

[1] . . . ಗೆಬಿಟ್ಟದೇವರ್‌ಬೆಸೆಸೆವೈ .
[2]ಪಲರಂಕೊನ್ದುಸ್ವಾಮಿಕಾರ್ಯ್ಯಮಂ
[3]ಮಾಡಿಸುರಲೋಕಪ್ರಾಪ್ತನಾದಆತ . .
[4]ಮಪರೋಕ್ಷವಿನೆಯಂಮಾಡಿಸಿ . . . . ॥

99

ಅದೇ ಹೋಬಳಿ ಬೆನ್ನಾಯ್ಕನಹಳ್ಳಿ ಕೆಂಪಮ್ಮನ ಗುಡಿಯಲ್ಲಿರುವ ಕಲ್ಲು

[1]ಶ್ರೀಗಣದಿಪತೆನಮಃ
[2]ಬೆಂನಾಯಕನಹಳಿಯಗೌಡಪ್ರಜೆಗ
[3]ಳುವೊಪಿವೊ . ಶೆಲಂಮನಪುಜಯಂ . .
[4]ಲಕ್ಕೈಬೋಯಗೆಕೊಟರೂ

100

ಅದೇ ಗ್ರಾಮದಲ್ಲಿ ಈಶ್ವರದೇವಸ್ಥಾನದ ಮುಂದೆ ವೀರಕಲ್ಲು

[1]ಶ್ರೀಸ್ವಸ್ತಿಸಮಸ್ತಭುವನಾಶ್ರಯಂಪ್ರಿಥ್ವೀವಲ್ಲಭಂರಾಜಾಧಿರಾಜ . . . . . ಚೂಡಾಮಣಿ ಮಲೆರಾಜ
[2]ರಾಜಮಲಪರೊಳುಗಂಡ . . . . . .
[3] . . . ನಚೋಳ . . . . . .
[4] . . . ಸುವಂತ . . . . . .
5. . . . . ಳಗೆನಡೆವ .
6 . ರಗಂಡ . . . . . ಬಸಾವಂತರಗಂಡ
7 . . . . . ಲನೆಲಯ .
8 . . . . . ದೊಳ್ಸುರಭು
9 . . . . . .
10 . . . . . ಂಬಿಡುವರು . . . . ನಾತ್ಮಬ
[11]ಳೋಗ್ರಭುಜಪ್ರತಾಪದಿಂ . . . . . ರಾಯಸಾವಂತಕಂದರ್ಪ್ಪರಾಯಸಾವಂತ . . . . । ಬಿರುದ
[12]ಸುರಗಿಕಾಱಗ . . . . ಸುರತಾಳ . . . . ದಲ್ಲಣಶ್ರೀಚೆಂನಕೇಸವಶ್ರೀಹಡಪ . . ಪ್ಪಣದಾ . . . . ಸಕಲಗು
[13]ಣಸಂಪೂರ್ನಚೆಂನಪ್ಪನಾಯಕನು ॥ ಸಕವರುಷ ೧೨೯೪ ನೆಯಚಿತ್ರಭಾನುಸಂವತ್ಸರದಜೇಷ್ಟಸು ೧ ಆ । ಶ್ರೀ ವೀರಬಲ್ಲಾಳದೇವರುಜ . . .

[14] . . . . . ॥ ಶ್ರೀಮನುಮಹಾಸಾವಂತಾಧಿಪತಿ....ಮಾರೆಯನಾಯಕನಕುವರ . . . ಯ . ನುಅಳ್ಳೂರುವ
[15] . . ಯೊಳು . . . . . ದಯಿಂದಂಕೊಂದುಸ್ವರ್ಗ್ಗಸ್ಥನಾದನು ॥ ಮಂಗಳಮಹಾ ಶ್ರೀ ಶ್ರೀ

101

ಕಿಬ್ಬನಹಳ್ಳಿ ಸೋಬಳಿ ಹಟ್ಟಿಣದಲ್ಲಿರುವ ಬಸ್ತಿಯ ಚಂಪ್ರಶಾಲೆಯಲ್ಲಿರುವ ಕಲ್ಲು

ಪ್ರಮಾಣ — 2' 6" × 7'

[1]ಶ್ರೀಮತುಪರಮಗಂಭೀರಸ್ಯಾದ್ವಾದಾಮೋಘಲಾಂಛನಂಜೀಯಾತ್ತ್ರೈಲೋಕ್ಯನಾಥಸ್ಯಸಾ
[2]ಸನಂಜಿನಸಾಸನಂ ॥ ಸ್ವಸ್ತಿ ಸಮಸ್ತಭುವನಾಶ್ರಯಂ । ಶ್ರೀಪೃಥ್ವೀವಲ್ಲಭಂ । ಮಹಾರಾ
[3]ಜಾಧಿರಾಜಂ । ಪರಮೇಶ್ವರಂಪರಮಭಟ್ಟಾರಕಂ । ಸತ್ಯಾಶ್ರಯಕುಳತಿಲಕಂ । ಚಾ
[4]ಳುಕ್ಯಾಭರಣಂ । ಶ್ರೀಮತುಭೂಲೋಕಮಲ್ಲಸೋಮೇಶ್ವರ . . . .
[5]ದೇವರು । ವಿಜಯರಾಜ್ಯಮುತ್ತರೋತ್ತರಾಭಿವೃದ್ಧಿಪ್ರವರ್ದ್ಧಮಾನಮಾಚಂದ್ರಾರ್ಕ್ಕತಾರಂಬರಂಸ
[6]ಲಿಸುತ್ತಮಿರೆ ॥ ಶ್ರೀಮತುತ್ತ್ರಿಭುವನಮಲ್ಲನೆಱೆಯಂಗಹೊಯ್ಸಳದೇವಗ್ಗರ್ಂ । ಯೇಚಲದೇವಿಗಂಮುದಿತೋದಿ
[7]ತಮಾಗಲುಬಂದವಂಶವತಾರಮೆಂತೆಂದಡೆ ॥ ಸ್ವಸ್ತಿ ಶ್ರೀಮನುಮಾಹಾಮಂಡಳೇಶ್ವರಂದಾರಾವತೀಪುರವರಾ
[8]ದೀಶ್ವರಂ । ಯದವಕುಳಾಂಬರದ್ಯುಮಣಿ । ಸಂಮ್ಯಕ್ತ್ವಚೂ . . ಡಾಮಣಿ । ಮಲಪರೊಳುಗಂಡ । ಕದನ
[9]ಪ್ರಚಂಡ । ನಸಹಾಯಸೂರಗಿರಿದುರ್ಗ್ಗಮಲ್ಲನಿಶ್ಶಂಕಪ್ರತಾಪಭುಜಬಳಚಕ್ರವರ್ತ್ತಿ ಶ್ರೀವೀರಬ
[10]ಲ್ಲಾಳುದೇವರುಪೃಥ್ವೀರಾಜ್ಯಂಗೆಯ್ಯುತ್ತಮಿರೆ ॥ ತತೂಪದಪದುಮೋಪಜೀವಿಶ್ರೀಮನುಮಹಾಸಾ
[11]ಮಂತಗಂಡರಾದಿತ್ಯಂಗಂಹುಗ್ಗಿಯನ್ನೆಸಾಯಕಿತ್ತಿಗಂಸ್ಫುತ್ರಂಕುಳದೀಪಕರೆನಿಸಿಪುಟ್ಟಿದರು । ಸಾಮಂ
[12]ತಸುಬ್ಬಯನುಂ । ಸಾಮಂತಸಾತಯ್ಯನುಂ । ಸಾಮಂತಬುವಯ್ಯನುಂ । ಶ್ರೀಮನುಮಹಾಸಾ
[13]ಮಂತಮಾಚಯ್ಯನಪ್ರತಪವೆಂತೆಂದಡೆ ॥ ಸ್ವಸ್ತಿ ಸಮಧಿಗತಪಂಚಮಹಾಶಬ್ದಮಹಾಸಾಮಂ
[14]ತವೀರಲಕ್ಷ್ಮೀಕಾಂತ । . . . ಯರೇವಂತಪರಬಳಕಿತಾಂತ । . . ಗಂಡರವದಿಸುವಸಾಮಂತರಗಂಡ ।
[15]ಕೂಟಕೆಂ . ಗಂಡ । ಸಮರಪ್ರಚಂಡೆ । ನುಡಿದಂತೆಗಂಡ । . . ತ್ರಂಪರಾಂಗನಾಪುತ್ರಂದಾಯಿಗಮುರಾ
[16]ರಿವಿನಿಯೋಪಕಾ . . ಸಿತಾ . . ಲ್ಲಭಾದುಷ್ಟಾಶ್ವೆವುಲ್ಲಂಭೀತರಕೊಲ್ಲಂಹವಿಯಮಾರ್ಕ್ಕೊಳು
[17]ವಂದಳುವಬೆಂಕೊಳುವಂ । ಇಡಗೂರದೇವೀಲಬ್ದವರಪ್ರಸಾದ । ಖ್ರಗಮುದಾಮೋದ । ಯತ್ತಿಲವಾ
[18]ನವಿಕಾಶ । ಚಂದ್ರಸದಾನಂದ । ಭೋಗನಾಗೇಂದ್ರ । ಹೊಯ್ಸಳದೇವಸಾದಾರಾಧಕಂ । ಪರಬಳಸಾಧಕಂ ।

ನೀತಿಚಾ

[19]ಣಕ್ಯಂ । ಯೇಕವಾಕ್ಯವೈರಿ । ಮನೋಭಂಗ । ಅಯ್ಯನಸಿಂಗದಾಯಿಗದುಟ್ಟರಗಂಡ । ತಪ್ಪಿತಪ್ಪುವ । ವೀರ
[20](ದಿ)ದಿಂದೊಪ್ಪುವ । ಸಮಾಂತಜಗದಾಳ । ಮಲೆಯತಾತ್ತಳದುಳಿಮ । ಮಲೆಗೆಬಿ . . ನೆ । ಯೆತ್ತಿದಮೊ
[21]ನೆಗೆಮುಂತುಕೆಟ್ಟಕಾಳೆಗಕೆಪಿಂತು । ಲಕ್ಷ್ಮಿದಬಳಿಗೆರದುಗಳಂ । ಚತುಸಮಯಸಮುದರ
[22]ಣನಪ್ಪಶ್ರೀಮನುಮಹಾಸಾಮಂತಮಾಚಯ್ಯನನ್ವಾಯವೆಂತೆಂದಡೆ ॥ ಬಿಳುಗೆಱೆಯವಮಾ
[23]ಜೆಯನಾಯಕನನುಪಮಗುಣರತ್ನೆ ಮಾಕಲದೇವಿಯದಾನವ್ರತಮೆಸೆಯೆಜೈತ್ಯಗೇಹ ·
[24]ಮನತ್ತಿರ್ಯೊಳೊಪ್ಪಿನಾಳ್ಕುಮಾಪಟ್ಟಣದೊಳು ॥ ಸರ[ಸ]ತಿಗೆರತಿಗೆಸೀತೆಗೆಸರಿದೊಱೆಯೆನಿಸಿ
[25]ದಮಾರೆಯನಾಯಕನಸತಿಯುಂಧರೆಯೇಂಬಂಣ್ಣಿಸುವದುನಿರಂತರಂಸೆಗಳುದಬಂ
[26]ಧಿಯವೆಯಪೆಂಪಂ ॥ ಸರಣೆನೆಕಾಯಲುಬಲ್ಲಂ । ನೆರದತ್ತಿಯೊಳಿಯಬಲ್ಲಗಾಶ್ರಿತಜ
[27]ನಕಂ । ಪರಬಳವೈರಿಭೂಪರಕೊಲಬಲ್ಲಂಬೆಳುಗೆಱೆಯಬಲ್ಲನಿಮ್ಮಡಿಬಲ್ಲ ॥ ರುಗುಮಿಣಿಬೆಳಗಿ
[28]ದರುಂಧತಿ । ವಿಗಿಲೆನಿಸಿದಸೀತೆಯೆಂಬಸತಿಯರೊಳೀಗಳು । ಸಮನೆನಿಪ । ಸತಿಯಂನಿಸಿದಸತಿ
[29]ಯಲ್ಲರೆ । ಬಲ್ಲಯ್ಯನದರ್ದ್ಧಾಂಗಿ । ಕೇತವೆದೇವಿಯಕ್ಕಂಧರೆಯೊಳು ॥ ಶ್ರೀಮತುಸಾವಂತ್ತಬಲ್ಲಿದೇ

30ವನರ್ದಂಗಿಕೇತವ್ವೆನಾಯಕ್ತಿರುಂದೇವಿಯಕನಾಯಕಿತಿಯರುಂಅವರಸುಪುತ್ರಸುಯ್ಯದೇವಸೆರು
31ಮಾಳುದೇವಸಾಮಂನ್ತಮಾರಯ್ಯಮಾಚಿದೇವನುಸುಕಸಂಕತಾವಿನೋದದಿಂರಾಜ್ಯಂಗೆಯುತ್ತಿರೆ ॥
32ಸಾದಿಸಿದಮೋಕ್ಷಲಕ್ಷ್ಮಿಯನಾದರದಿಂದಭಯರನ್ನದಾನವಿನೋದಂಮೇದಿನಿಯೊಳೊಪ್ಪೆಮಾ
33ಡುವಸಾಸಲಬಂಮಯ್ಯ । ಭವ್ಯತಿಳಕಂದರೆಯೊಳು ॥ ವ್ಯಕುಳತಿಳಕನೊಪ್ಪುವಲಗ್ರಜಮಾ
34ಣಿಕ್ಯ । ಚಾಕಿಸೆಟ್ಟಿಯರನುಜಂ । ಎಱಕಾಟ್ಟಿಸೆಟ್ಟಿಯಿನ್ತೀತ್ರೈಪುರ್ಶರ್ನ್ನೆಗಳ್ದದಾನಚಿಂತಾಮಣಿ
35ಗಳು ॥ ತರ್ಕ್ಕವ್ಯಾಕರಣದೊಳಂ । ಮಖಾಣಗೆಬಲ್ಲಸಕಲಸಾಸ್ತ್ರೋಕ್ತಿಗಳಿಂಮಿಕ್ಕದತಿಜಾಣಂ । ಧರ್ಮ್ಮಕರ್ತ್ತಿ
36ಗನೆಗಳ್ದಿರ್ದ್ದಮಾಚಿಸೆಟ್ಟಿಯೆಧನ್ಯಂ ॥ ಆಮಾಚಿಸೆಟ್ಟಿಯ(ನ)ನುಜಂ । ಭಾವಿಸೆಶ್ರೀಜ್ಞೆನಧರ್ಮ್ಮಸುರಕುಜ
37ದಂನ್ನಂಗಾರ್ಸ್ಸಮನೆನಿಸಲುಕಾರ್ಪ್ಪರೆಯಿಾವಗುಣಂಕಾಳಿಸೆಟ್ಟಿಯೊರೆಗಂದೊರೆಗಂ ॥ ಕಲಿಕಾ
38ಲಕಲ್ಪವ್ರಿಕ್ಷಮನಲಸದೆನೀಂಬೇಡುಕಾಳಿಸೆಟ್ಟಿಯಸುತನಂ । ಪಲವುಂಪೊಂನಂವಸ್ತ್ರಮ । ಸಲೆ
39ಯಿಾಯಲುಬಲ್ಲಮಾನ್ಯನಾಬಮ್ಮಯ್ಯಂ ॥ ಆಶ್ರುತಜನಚಿಂತಾಮಣಿವಿಸ್ರುತಕೀರ್ತ್ತೀಶನಮಳಬೋ
40ಧಾಧೀಸಂಶ್ರೀಸ್ರೇಯಾಂಸಜಿನೇಸಂವೈಸ್ರಾವಣಸೆಟ್ಟಿಗೀಗೆಸುಖಸಂಪದವಂ॥ ನುಡಿದೆರಡನುಡಿವನಲ್ಲಂಕಡುಗ
41ಪರಗಡಣವಿಲ್ಲಆಶ್ರಿತಜನಕಂತೆಡೆಯಡುಗದೀವದಾನವ್ರತಿಯಂಕರ್ಪ್ಪೂರಸೆಟ್ಟಿಯಂಬೇಡುಬುದಾ ॥
42ಕೀರ್ತ್ತಿಶ್ರೀರಮ[ಣ]ನವೊಲುಮುರ್ತ್ತಿಯೊಳಭಿನವಮನೋಜನನಿವಾನಂ । ಕೂರ್ತ್ತೀವಮಸಣಸೆಟ್ಟಿಗೆಮಾರ್ತ್ತಂಡನ
43ಮಗನಳನ . . . ನ್ರಿ . . ಳವೆ । ಅಱಿಯಂ . . . ಮನುಜ । ರ್ಗ್ಗಂಮಱಿವೊಕ್ಕರನೆಯ್ದೆಕಾವಬಂಧುಜನ
44ಕ್ಕಂನೆಱಿಪೋಲ್ತಕಲ್ಪತರುವಂನೆಱಿಬಂಣಿಪುದೆಯ್ದೆಕಾಚಿಸೆಟ್ಟಿಯಂಮಾದಿವನಂ ॥ ಗಣಧರಭುವ
45ನಂನ್ವಯಶಿಖಾಮಣಿಗೋತ್ರಪವಿತ್ರನದ್ವಿಶಂಗುಣಗಣನಾಥಗುಣ್ಪಿನಮಾಂಧತಿ । ಪೆಂಪಿನಮೇರು
46ವೊಂದಗಣಿತಬಾವಸತ್ಯದತವರ್ಮ್ಮನೆಮಾನ[ವ]ವಂದ್ಯನೆಂದೊಡಿಂನೆಣೆಯಾರೊಹಟ್ಟಣದೊಳೊ
47ಪ್ಪುವಮಾಣಿಕನಂದಿದೇವರೊಳು ॥ ಸ್ವಸ್ತಿಸಕವರಿಸಸಾಯಿರದಕಾಳಯುಕ್ತಸಂವತ್ಸರಂಪ್ರವರ್ತ್ತಿ
48ಸೆನಖರಜಿನಾಲಯಕೆಬಿಟ್ಟಭೂಮಿಹಿರಿಯಕೆರೆಯಲುಮನಹನಮಡುವಿನಗದ್ದೆಸ
49ಲಗೆ ೨ ಕೊ ೧೦ ಕಾಳಿಸೆಟ್ಟಿಯಕೆಱಿಬಡಗಣಕೋಡಿತೆಂಕಲಾಲದಕೋಡಿನೀರಾಕೆಯಾಗಿಬಿಟ್ಟಭೂಮಿ ॥ ಭುಜ್ಯ
50ಯಣನಕೆಱಿಯಲುಸ ೩ ಮದ್ದಬೋವನಕೆಱಿಸ ೧ ಮಾದಿಸೆಟ್ಟಿಕೆಱಿಯಲಿಸ ೩ ಮದಗದೇವಸೆಟ್ಟಿಲಕೆ
51ಱಿಕೊ ೧೦ ಕಾಚಿಸೆಟ್ಟಿಯಮಹದೇವಸೆಟ್ಟಿಯಕೆಱಿಯಕೆಳಗೆಸ ೧೦ ಆಪಟ್ಟಣದಲುನಡವದೇವ
52ದಾಯಹತ್ತುಹೇಱಿಂಗೆಹಗದೇವರಿಗೆಸೊಡರೆಂಣೆಗೆಗಾಣ ೧। ಯಿಧಂರ್ಮ್ಮವತಪಿಸಿದವಗೆಗಂ
53ಗೆಯತಡಿಯಲುಕವಿಲೆಯಕೊಂದಬ್ರಮ್ಮಾತಿ ॥ ಶ್ರಿಮೂಲಸಂಗದೇಶಿಯಗಣಪೊಸ್ತಕಗಛ
54ಕೊಂದಕುಂದಾನ್ವಯದಶ್ರೀಮತುನಾಗಚಂದ್ರಚಾಂದ್ರಾಯಣದೇವರಸಿಷ್ಯರುಣಿಕಛಗೊಂಡಿದೇವರುಮ
55ದವಳಿಗೆಬೊಪ್ಪವೆಮಗಳುಕಾಚವೆಮಲ್ಲವೆಮಾದವೆಮಾಚವೆಬಳಚಂದ್ರದೇವರು ॥
56 ಸೆಟ್ಟಿಯಹಳ್ಳಿ · ಯಮಲ್ಲಿಸೆಟ್ಟಚಿಕ್ಕಸೆಟ್ಟಿತಮ್ಮಬಸೆಟ್ಟಿಗೆಬಿಟ್ಟಭೂಮಿಜಕ್ಕಸಮುದ್ರದಲಿಸಲಗೆ ೫
57 * ರೊದದಹಲೋಜನಮಗಭೀರೋಜಇಸಸನವಹೊಇದ ॥

102

ಅದೇ ಬಸ್ತಿಗೆ ಸೇರಿದ ಹಿತ್ತಲಲ್ಲಿರುವದು

1ಶ್ರೀಮತುಗುರುಬಸ
2ವಗಾಜದೇವರಿಗೆ
3ಮುದಿಯಪ್ಪನಯ
4ಕಭಕ್ತಿಯಿಂಹಟಣ
5ದಲಿಮಟವಕೊಟ

103

ಕಿಬ್ಬನಹಳ್ಳಿಗ್ರಾಮದ ಕೆರೆಯ ಏರೀಕೆಳಗೆ ಬಿದ್ದಿರುವ ಕಲ್ಲು

1ಸ್ವಸ್ತಿಸಕವರಿಷಎನ್ಟುನೂ
2ಱತೊಂಭತನಾಲ್ಕನೆಯಆಂಗಿರ
3ಸಂವತ್ಸರಂಪ್ರವತ್ತಿಸೆಸ್ವಸ್ತಿಸತ್ಯ
4ವಾಕ್ಯಕೊಂಗುಣಿವರ್ಮ್ಮಧರ್ಮ್ಮಮ

* ಈಪಜ್ತೆಯ ಮೇಲ್ಭಾಗದಲ್ಲಿ ಬರೆದಿದೆ

[5]ಹಾರರಾಜಾಧಿರಾಜಕೋಲಾಲಪುರವರೇಶ್ವ
[6]ರಂನನ್ದಗಿರಿನಾತಂಜಲದುತ್ತರಂಗಂಶ್ರೀಮ
[7]ತುನೊಬುಬಕುಳಾನ್ತಕಂಶ್ರೀಮತ್ಪೆರ್ಮ್ಮಾನಡಿಗ
[8]ಳ್‌ನೊಬುಂಬರೆಲ್ಲಮಂಕೊನ್ದುತೊಂಭತ್ತುಸಾಸಿರ
[9]ಮನಾಳುತ್ತಮಿರೆಮಣ್ಡಲ
[10]ಧಿಕಾರಮಣ್ಡಳಂಗಾವೊಪ
[11]ರಸಲಳುತ್ತಂಶ್ರೀಷಟ್ಟವ . ಗಾ
[12]ವಗಅರಸಬೆಳ್ಗೆಯಿಯಂದಯೆಗೆ
[13]ಯ್ದುಆಳುತ್ತವಿಬ್ದಕ್ಕಕಾ . ತಿಕ್ರಮಂಬಿತ್ತುವಟ್ಟಮನಾ
[14]ಗರಸಿ . ಅಲಂಗಿಸಿಯಲ್ಲದೆಕೊರಕ್ಕೊಳಾಲಾಗಮಿ . ಕೊಣ್ಡಾತ
[15]ವಾರಣಾಸಿಯಲ್ಕುವಲೆಯನಱಿವಅದಿಕೆಲಗವರು
[16]ಮದೆರಣ್ಡದಾಧಿಕುಕೊಟ್ಟಕಾಳಗದಲತಿಗುಮೆ . ಯದಗೊಟ್ಟ
[17] . ಗಾವಿನುಕಲ್ಲಿಸಿಭಱಿವಿದಿದಳ್ತರಿಕಿಗಲಿರುಱಿತ್ಮದ .
[18]ಗಮನಱಿದಕಾಳಗದಲತಿಗುವಾಚಾಬಿಬರತಯಮಗಾ
[19]ಮ್ಱಳಿಕಲ್ಲಂಬರೆದಗಾವಯ್ಯನಸೇನಬೋವಕಾಮಯ್ಯ .
[20]ಕಂಬಯ್ಯಗವ್ರಣ್ಡಕಡಿದ

104

ಅದೇ ಹೋಬಳಿ ಬೆಳಗೆರೆ ಗ್ರಾಮದ ಕೆರೀ ಕೆಳಗಣ ದೊಡ್ಡ ಕಲ್ಲು

[1]ನಮಸ್ತುಂಗಶಿರಶ್ಚುಂಬಿಚಂದ್ರಚಾಮರಜಾರವೇತ್ರೈಲೋಕ್ಯನಗರಾಱಿಂಭಮೂಲಸ್ತಂಭಾಯ
[2]ಶಂಭವೇ ॥ ಸ್ವಸ್ತಿಸಮಸ್ತಭುವನಾಶ್ರಯಂಶ್ರೀಪೃತಿವೀವಲ್ಲಭಂಮಹಾರಾಜಾಧಿರಾಜಂಪರಮೇಶ್ವ(ರಂ)
[3]ರಂಪರಮಭಟ್ಟಾರಕಂಸತ್ಯಾಶ್ರಯಕುಲತಿಲಕಂಚಾಲುಕ್ಯಾಭರಣಂಶ್ರೀಮತುಭೂಲೋಕಮಲ್ಲ
[4]ಸೋಮೇಶ್ವರದೇವರುವಿಜಯರಾಜ್ಯಮುತ್ತರೋತ್ತರಾಭಿವ್ರಿದ್ಧಿಪ್ರವರ್ಧಮಾನಮಾಚು
[5]ದ್ರಾರ್ಕ್ಕತಾರಂಬರಂಸಲಿಸುತ್ತಮಿರೆ ॥ ಶ್ರೀಮತ್ರಿಭುವನಮಲ್ಲಯಱಿಯಂಗವೊಯ್ಸಳದೇ
[6]ವಗಂಏಚಲದೇವಿಯಗಂಮುದಿತೋದಿತವಾಗಲುಪುಟ್ಟದಂಶ್ರೀವಿಷ್ಣುವರ್ಧನದೇವರು ॥
[7]ಸ್ವಸ್ತಿಸಮಧಿಗತಪಂಚಮಹಾಶಬ್ದಮಹಾಮಣ್ಡಳೇಶ್ವರಂದ್ವಾರಾವತೀಪುರವರಾಧೀಶ್ವರಂ
[8]ಯಾದವಕುಳಾಂಬರದ್ಯುಮಣಿಸಂವ್ಯಕ್ತಚೂಡಾಮಣಿಮಳಪರೊಳ್ಗಣ್ಡಾದ್ಯನೇ
[9]ಕನಿಜನಾವಾವಳೀಸಮೇತರಪ್ಪಶ್ರೀಮನ್ಮಹಾಮಣ್ಡಳೇಶ್ವರತ್ರಿಭುವನಮಲ್ಲತಳ
[10]ಕಾಡುಗೊಂಡಭುಜಬಳವೀರಗಂಗಪೊಯ್ಸಳದೇವರುಗಂಗವಾಡಿತೊಂಭತ್ತುಸಾಸಿರ
[11]ಮುಮಂದುಷ್ಟನಿಗ್ರಹಶಿಷ್ಟಪ್ರತಿಪಾಳನಮಾಡಿಸುಖಸಂಕಥಾವಿನೋದದಿಂರಾಜ್ಯಂ
[12]ಗೆಯ್ಯುತವಿರೆ ॥ ತತುಪಾದಪಂಕಜೋಪಜೀವಿಶ್ರೀಮನ್ಮಹಾಸಾಮಂತಗಂಡರಾದಿತ್ಯಂ
[13]ಗಂಹುಳಿಯವೆನಾಯಕಿತ್ತಿಯರ್ಗಂಸುಪುತ್ರಕುಲದೀಪಕರೆನಿಸಿಪುಟಿದರುನಾ
[14]ಮಂತಸುಬಯ್ಯನುಮುನಾಮಂತನಾಂತಯ್ಯನುನಾಮಂತಬೂವಯ್ಯನುಂ
[15]ಶ್ರೀಮನುಮಹಾನಾಮಂತಮಾಚಯ್ಯನಪ್ರತಾಪಮೆಂತೆಂದಡೆ ॥ ಸ್ವಸ್ತಿಸಮಧಿ
[16]ಗತಪಂಚಮಹಾಶಬುದಮಹಾನಾಮಂತವೀರಲಕ್ಷ್ಮುವಿೂಕಾಂತತುರಕಠೇವಂತಪ
[17]ರಬಳಕ್ರಿತಾಂತದಿಂಡುಗಂಡರವರಿಸುವನಾಮಂತರಗಂಡ ... ಳುಗಂಡಸಮರಪ್ರಚಂ
[18]ಡನುಡಿದಂತೆಗಂಡಗೋತ್ರಪವಿತ್ರಾಪರಾಂಗನಾಪುತ್ರಂದಾಯಿಗಮು ರಾರಿವಿನಯೋಪಕಾ

19ರಿಪುಸಿಲೋಭದುರ್ಲಭಂದುಷ್ಟಾಶ್ವಮಲ್ಲಭೀತರಕೊಲ್ಲಹರಿಯಮಾಕೊಳುವದಳವಬೆಂಕೊಳು
20ವಈಡುಗೂರದೇವೀಲಬುಧವರಪ್ರಸಾದಮ್ರಿಗಮದಾಮೋದಯರ್ತಿಲಕುಲವನವಿಕಾ
21ಶಚಂದ್ರಸದಾನಂದಭೋಗನಾಗೇಂದ್ರಪೊಯ್ಸಳದೇವಪಾದಾರಾಧಕಂಪರಬಳಸಾಧಕಂನೀತಿ
22ಚಾಣಕ್ಯಯೇಕವಾಕ್ಯವೈರಿಮನೋಭಂಗಅಯ್ಯನಸಿಂಗದಾಯಿಗದುಟರಗಂಡತಪೆತಪ್ಪು
23ವವೀರದಿಂದೊಪ್ಪುವಸಾಮಂತಜಗದಾಳಮಲೆಯತೊತ್ತಳದುಳಿವಯತ್ತಿದಮಾನೆಗೆಮುಂತುಕಡಿ
24ಕಾಲಗಕ್ಕೆಪಿಂತುಅಟಿದಬೀಳಿಗೆರಡು . ಱಶಿವಧರ್ಮ್ಮನಿರ್ಮ್ಮಲನಪ್ಪಶ್ರೀಮನುಮಹಾಸಾಮಂತ
25ಮಾಚಿಯಂಣಂಅರಕೆಱಿಕಾಱಿಗುಂಡಬೆಳುವಱಿಕರಿವಿಡಿಹಿಂಚನೂರುಮಂನಂಬಾಱುಕ
26ರಡಿಹಾಲುಅಲರಿಗುಪ್ಪೆಕುಂದೂರುಬಾಳಸಮುದ್ರಈಡಗೂರುಪಟಣಬೆಱುಗೆಱಿಬೀಡಿಕೆ
27ಯಾಗಿಸುಖದಿನಾಱುತಮಿರ್ದುಶಿವಲೋಕಪ್ರಾಪ್ತನಾದ ॥ ಸ್ವಸ್ತಿಶ್ರೀಮನುಮಹಾಸಾಮಂತ
28ವೀರಲಕ್ಷುಮಿಕಾಂತತುರಕರೇವಂತಪರಬಳಕ್ರಿತಾಂತಸಿಷ್ಟೇಷ್ಟವಿಭುಧಗಾಯಕನಾಯಕವಂದಿ
29ವ್ರಿಂದಾರಿಸಮಸ್ತಜನನಿವಾಸಅಯ್ಯನಚಂದ್ರಹಾಸಉಭೆಯಬಳಚಮತುಕಾರಯೇಕಾಂಗವೀರಬಿ
20ಟ್ಟದೇವನಪಾದಪಂಕಜಭ್ರಮರಶಿವಪಾದಶೇಖರಂಶ್ರೀಮನುಮಹಾಸಾಮಂತಗಂಡರಾದಿತ್ಯಂಸುಖ
31ದಿನಾಳುತಮಿರ್ದುಶ್ರೀಮಚಾಳುಕ್ಯವಿಕ್ರಮಕಾಲದ ೫೪ ನೆಯಸಾಧಾರಣಸಂವತ್ಸರ
32ದಕಾರ್ತಿಕಸುದ್ದಪಾಡಿವವಡ್ಡೆವಾರಸೂರ್ಯ್ಯಗ್ರಹಣದಲುರುದ್ರಶಿವಪಂಡಿತರಪುತ್ರಂಸಕ
33ಳೇಶ್ವರಪಂಡಿತರಕಾಲಂಕರ್ಚಿಧಾರಾಪೂರ್ಬಕಂಮಾಡಿಮಾಚೇಶ್ವರದೇವರ್ಗೆಬಿಟ್ಟದತ್ತಿನಾಕಂಡುಗಗರ್ದೆ
34ಒಮ್ಮತ್ತುರ್ಬೆರ್ದಲೆಯರಡುಗಾಣಖಂಡುಗಗರ್ದೆಗೆಅಯಿಗುಳಬಿತ್ತುವಟ್ಟಮಂಕೆಱಿಗೆಬಿಟ್ಟುಧರ್ಮ
35ಮಂಪ್ರತಿಪಾಱಿಸುತಮಿರೆ ॥ ಈಧರ್ಮವಂಪ್ರತಿಪಾಳಿಸಿದವರುಗಂಗೆಗುರುಕ್ಷೇತ್ರವಾಣರಾಸಿಯ
36ಲುಸಾಯಿರಬ್ರಾಂಹ್ಮಣರ್ಗಂಸಾಯಿರತಪೋಧನರ್ಗಂಈರ್ಚಾಸಿರಕವಿಲೆಯಂಕೊಟ್ಟಫಳವಕ್ಕುಈ
37ಧರ್ಮ್ಮವಂಕಿಡಿಸಿದವಂಆಬ್ರಾಹ್ಮಣರಆತಪೋಧನರಆಕವಿಲೆಯನಿಸುಲೆಗೆಯಲುಆ
38ತೀರ್ತ್ತದಲುಅಳಿದಮಹಾಪಾತಕ ॥ ಶ್ರೀಮತುಮೂಕಗವುಂಡಂಗಬಮ್ಮಗವುಂಡಿಗಂಪುಟಿದಂಸು
39ಪುತ್ರಕುಲದೀಪಕಂ ॥ ವಿಲಸದುದೆಯಾದ್ರಿತಟದೊಳುತೊಳತೊಳತೊಳಗುವದಿನೇಶಬಿಂಬದ
40ತೆಱದಿಂದೆಳೆಯೊಳಗೆತನ್ನಗೋತ್ರಕುಳದೀಪಕನೆನಸಿನಿಂದಹೆರ್ಗಡೆಮಯಿಂದ ॥ ಅರಮನೆಗೊಂ
41ಡೆಯರಗಂಡತನ್ನತಾನೇಪೊಗಳುವರಗಂಡಪರೋಕ್ಷವಿನಯಮಂಮಾಡಿಮಾಚೇಶ್ವರಮಂನೆತ್ತಿಸಿ
42ದಂಹೆರ್ಗಡೆಮಯಿಂದಯ್ಯಂಸಸಿಸೂರ್ಯ್ಯನುಳ್ಳಂನೆವರಂ ॥ ಶ್ರೀಮತುವಿನಯಾ
43ದಿತ್ಯಭಟರಪುತ್ರಂಹೊಂನ್ನಾಡಿಮಯ್ಯಂಬರದ ॥ ಕರಿವಿಡಿಯಕ್ಕಸಾಲೆಹುಳಿಯಾಚಾರಿಯ
44ಪುತ್ರಂಜಕೋಜನಕೆಲಸ ॥ ಸಳೆಎರ್ಣಬಿಟ್ಟ . . . . .

105

ಅದೇ ಸ್ಥಳದಲ್ಲಿ ಚಿಕ್ಕ ಕಲ್ಲು

1ಶ್ರೀನಮಸ್ತುಂಗಶಿರಸ್ತುಂಬಿಚಂದ್ರಚಾಮರಚಾರವೇತ್ರೈಳೋಕ್ಯನಗರಾರಂಭಮೂಲಸ್ತಂಭಿ
2ಯಸ್ವಯಂಭುವೇ ॥ ಸ್ವಸ್ತಿಸಮಸ್ತಭುವನಾಶ್ರಯಶ್ರೀಪ್ರಿಥಿವೀವಲ್ಲಭತ್ರಿಭು
3ವನಮಲ್ಲಪೆರ್ಮ್ಮಾಡಿದೇವರಾಜ್ಯಂಗೆಯುತ್ತಮಿರೆಸ್ವಸ್ತಿಸಕವರಿಷಸಾಯಿರ
4ದಕಾಳಯುಕ್ತಿಸಂವತ್ಸರಂಪ್ರವರ್ತ್ತಿಸೆಸ್ವಸ್ತಿಸಮಧಿಗತಪಂಚಮಹಾ
5ಸಬುದಮಹಾಮಂಡಳೇಶ್ವರದ್ವಾರಾವತೀಪುರವರೇಶ್ವರಶ್ರೀಮನುಮಹಾ(ಮಾ)
6ಮಲಪರೊಳುಗಂಡವಿನೆಯಾದಿತ್ಯಹೊಯ್ಸಳದೇವರುಗಂಗವಾಡಿತೊಂಭತ್ತಱುಸಾ
7ಸಿರಮನಾಳುತ್ತಮಿರೆತತುಪಾದಪದುಮೋಪಜೀವಿ ॥ ಸ್ವಸ್ತಿಸಮಧಿಗತ
8ಪಂಚಮಹಾಸಬುದಮಹಾಸಾಮ . . . . ಅರಕೆಱಿಕಾಳಿಗುಂಡಂಕರಿವಿ

9ಡಬೆಳುಗೆಱಿಕುಂದುರುಬಾಳಸಮುದ್ರ . . . . . ಱುಮನೆಅಪಾಳುಗಂಡ
10ರಾದಿತ್ಯಆಳುತ್ತಮಿರೆಗಂಡರಾದಿ . . . . . ಗೆಪುಟ್ಟದಸುವುತ್ರ
11ಕಂಎತ್ತಿಲರಕುಲತಿಲಕ ॥ ಸ್ವಸ್ತಿಸಮಧಿಗಪಂತಚಮಹಾಸಬುದಮಹಾಸಾಮಂತ
12ವೀರಲಕ್ಷ್ಮೀಕಾಂತತುರಕರೇವಂತಪರಬಿಳಕ್ರಿತಾಂತಪರಮಂಡಳಸೂಱಿಕಾಱ
13ಅರೆವರಿಸುವರಗಣ್ಡ . ಟ . ಳುಗಂಡಸಮರಪ್ರಚಂಣ್ಡನು[ಡಿ]ದಂತೆಗಂಡಂ
14ಗೋತ್ರಚಿಂನ್ತಾಮಣಿಗೋತ್ರಪವಿತ್ರಂಪರನಾರೀಪುತ್ರಂದಾಯಿಗಬೇಂಟಿಕಾಱ
15ಮಾವನಂಕಕಾಱಂವಿನೆಯೋಪಕಾರಿಪುಸಿಲೋಭದುರ್ಲ್ಲಭಂದುಷ್ಟಾಸ್ವಮಲ್ಲಂ
16ಭೀತರಕೊಲ್ಲಂದಳವಬೆಂಕೊಳ್ವಂಪರಬಳಭಯಂಕರವೈರಿಮದೇಭಕಣ್ಠೀರಪಂ
17ಸತ್ಯಮಹಾರ್ಣ್ಣವಂಭೋಗಸಯಂಬುಶ್ರೀಭೂಪವಿದ್ಯಾಧರಂಗುಣಗಣಸ್ರಮಂಶ್ರೀಕಂ .
18ವಿಳಾಸಂಭೋಗಪುರನ್ದರಂದಾನವಿನೋದಂಸಿವಪಾದಸೇಕರ . . ಕಕಾಱಸಿವಧರ್ಮ್ಮನಿರ್ಮ್ಮ
19ಳಅರ್ಚಕಜನಕಲುಪತರುವಂದಿಜನಾಸ್ರಯಂಸುಜನೈಕಮಿತ್ರಬಂಧುಜನಕ
20ಲುಪವ್ರಿಕ್ಷಂಅಸ್ರಿತಜನಚಿನ್ತಾಮಣಿಅನೇಕನಾಮಾಳಿನಾಮಾದಿಸಮಸ್ತಪ್ರ
21ಸಸ್ತಿಸಹಿತಶ್ರೀಮನ್ಮಹಾಸಾಮಂತಸಾನ್ತಯ್ಯಂಚಾಳುಕ್ಯವಿಕ್ರಮಕಾಲಮುವತ್ತೊ
22ನ್ದನೆಯಸರ್ವ್ವಜಿತುಸಂವತ್ಸರದನ್ದುಯುತ್ತರಾಯಣಸಂಕ್ರಾಂತಿಪೌಸ್ಯಸುದ್ದಸೋ
23ಮವಾರದಂದುಸಾಮನ್ತಸಾಂನ್ತಯ್ಯರೆನೆತ್ತಿಸಿದಸಾನ್ತೇಸ್ವರದೇವರ್ಗ್ಗೆತಮ್ಮಗುರುರು
24ದ್ರಸಿವಪಣ್ಡಿತರ್ಗ್ಗೆಕಾಲಂಕರ್ಚ್ಚಿಧಾರಾಪೂರ್ವ್ವಕಂಮಾಡಿಕೊಟ್ಟದತ್ತಿಯನ್ತೆಂದಡೆ
25ಸಾನ್ತೇಸ್ವರದೇವರ್ಗ್ಗೆನಾಲ್ಗಣ್ಡುಗಂಮೂಲ . . . ವರ್ಗ್ಗೆಮೂಗಣ್ಡುಗಂಹಿ
26ರಿಯಕೆಱಿಯಎರಡುದೇವರ್ಗ್ಗಂಇರ್ಕಂಡುಗಂಅನ್ತುದೇವಸ್ವಕ್ಕೆಬಿಟ್ಟಗ
27ಱ್ದಿಒಂಭತ್ತುಖಂಡುಗಂಗಱ್ದಿಯಂಸಾಮನ್ತಸಾಂತಯ್ಯಸರ್ವ್ವಜಿತಸಂವತ್ಸರದಲ್ಲು
28ಭೂಮಿದಾನಂಗೆಯ್ದಯಿಧರ್ಮ್ಮವಂನಾವನಾದೊಡಂಪ್ರತಿಪಾಳಿಸಿ(ನಡಿಸಿ)
29ನಡಸಿದಾತಂಬಾಣರಾಸಿಪ್ರಯಾಗೆಗುರುಕ್ಷೇತ್ರವೆಂಬತೀರ್ತ್ತಗಳಲುಹನ್ನಿ
30ರ್ವ್ವರುತಪೋಧನರುಹನ್ನಿರ್ವ್ವರುಬ್ರಂಹಣರ್ಗ್ಗೆಯಿಪ್ಪತ್ತುನಾಲ್ಕುಕವಿಲೆಯ
31ದಾನಂಗೆಯ್ದಪಳ ॥ ಇಧರ್ಮ್ಮವನಾವನಾಗಿಅಳಿದ ... ಪಾತಕಂಆ
32ತಪೋದನರನಾಬ್ರಾಹ್ಮಣರಇಕವಿಲೆಯಂಬಣರಾಸಿಲಿಪ್ರಯಾಗೆಯ .
33ತೀರ್ತ್ತದಲ್ಲುಇಸುರಿಗೆಯಅಳಿದಂಮಹಾಪಾತಕಂ ॥ ಬೆಳುಗೆಱಿಯ . .
34ತಯಸುಕಸಂಕತಾವಿನೋದದಿಂರಾಜ್ಯಂಗೆಯ್ಯುತಂಮಿಱುದಿಅಗಳನಕಳಿಸಿ ...
35ನಿಕಿಸಿಬಿತ್ತುವಟ್ಟವಂಬಿಟ್ಟುಬಿತ್ತುವಟ್ಟಮಣಳಸಿಯಲ್ಲದೆಕೊರಕೊಳಲಾಗಕೊಂದ . .
36ಕವಿಲೆಯನಿಸುರಿಗೆಯಅಳಿದಮಹಾಪಾತಕಂ ॥ ಶ್ರೀಮನ್ಮಹಾಸಾಮಂತಸಾಂತಯ್ಯ
37ನಹಡಪಳಬುಮಯ್ಯನಮಗಂಹಡವಳಂಬಮ್ಮಯ್ಯಬರದಂ ॥ ಕೇತಯಮಾಳಪ್ಪನ
38ಸಿಲಾಕರ್ತುವಿನನೆಗಣೆಯುಮಿಂದ್ರಕತಮುಮಮಱ್ದುಂಸಾತಿಯಮಳರಿನಿಯುಂಬಮ್ಮಿ .
39ಕನಬರಪಮುಮದೇನಅಪೂರ್ವ್ವೋಜಗದಲು ॥ ಸ್ವಸ್ತಿಯಮನಿಯಮಸ್ವಾ
40ಧ್ಯಾಯಧಾನಧಾರಣಸೋತ್ರಿಯಕುಳತಿಳಕಯಿಡಿಗೆಯ . . ಸಿವಪಣ್ಡಿತಱಪು .
41ರುದ್ರಸಿವಪಂಡಿತಇಸಾಸನವಂಹೊಯ್ದಕಲ್ಕಕ್ಕಟ್ಟಿಗಸಾನ್ತಾಚಾರಿಗೆತಂನ . . . .
42ಳಗೆಗಱ್ದಿಹತ್ತುಕೊಳಗವಕೊಟ್ಟೆ

106

ಅದೇ ಹೋಬಳಿ ಬೀರಸಂದ್ರದ ದೇವಸ್ಥಾನದಲ್ಲಿರುವ ಕಲ್ಲು

1ಶುಭಮಸ್ತು | 2ಸ್ವಸ್ತಿಶ್ರೀವಿಜಯಾಭ್ಯುದಯಶಾಲಿ

[1]ವಾಹನಶಕವರುಷನಾ ೧ ... ನೆಯಪ್ರಮಾದೀಚ
[4]ಸಂವತ್ಸರದಶ್ರಾವಣಶುದ್ಧ ೧೫ ಲುಶ್ರೀಮತ್ತರಾ . .
[5]ರಾಜಪರಮೇಶ್ವರ . . . . . .
[6]ಜಾಧಿಪದೇವರಾಜಭೂಪಾಲಮಹಾರಾಯರವರು . . .
[7] . ಯಾದಮಹಿಷಾಸುರಮರ್ದಿನಿಬಿಟ್ಟದಚಾಮುಂಡೇಶ್ವರಿ ಅಮ್ಮ .
[8]ಅಂಗರಂಗವೈಭೋಗಪಡಿತರದೀಪಾರಾಧನೆ . .
[9]ಭುಜಬಲ . . . . . .
[10]ಸಮುದ್ರದಗ್ರಾಮ ೧ ಗುಳದಹಳ್ಳಿಗ್ರಾಮ ೧ . ಜುರಹಳ್ಳಿಗ್ರಾಮ ೧
[11] . . . . ಧಾರಾಪೂರ್ವಕವಾಗಿಕೊಟ್ಟಿವಾಗಿ . .
[12] . . . ನಿಧಿನಿಕ್ಷೇಪಜಲಪಾಷಾಣಅಕ್ಷ್ರೀಣಿಪಿಗಾವಿಸಿದ್ಧ ಸಾಧ್ಯ . .
. . . . . .

107

ಅದೇ ಹೋಬಳಿ ದುಂಡಡ ಗ್ರಾಮಕ್ಕೆ ಆಗ್ನೇಯ ಅಕ್ಕಸಾಲೆ ವೀರಮ್ಮನ ಹೊಲದಲ್ಲಿ

ನಾಗರಾಕ್ಷರ

[1]ಶ್ರೀವಿಘ್ನೇಶ್ವರಾಯನಮಃ ಶ್ರೀಸರಸ್ವತ್ಯೈನಮಃ ನಿರ್ವಿಘ್ನಮಸ್ತು
[2]ಸ್ವಸ್ತಿಶ್ರೀಜಯಾಭ್ಯುದಯಶಾಲಿನಾಶಾಹನಶಕವರ್ಷನಾವಿತದನಾನೂರಐ
[3]ವತ್ತೈಯ್ದನೆಯವಿಜಯಸಂವತ್ಸರದಲಿಷಾಢಶುದ್ಧದ್ವಾದಶಿಯೂಸೋಮವಾರದಲುಶ್ರೀಮ
[4]ನ್ಮಹಾರಾಜಾಧಿರಾಜ ... ... ಶ್ರೀ
(ಮುಂದೆ ಕಾಣುವದಿಲ್ಲ)

108

ಹಾಲ್ಕುರಿಕಿ ಹೋಬಳಿ ಬೇಚರಾಕ್ ಕೊಡಗೇಹಳ್ಳಿ ಗ್ರಾಮದ ಊರಮುಂದಣ ತೋಪಿನಲ್ಲಿ

(ಮೇಲ್ಬಾಗ ಹೋಗಿದೆ)
[1] . . . . . ಮರಾ
[2] . . . . . ಡುಸು
[3] . . . . . ತ್ರಿಬಸ
[4]ಮಣಒಡಯರಿಗೆಶಿವ
[5]ಪ್ರೀತಿಯೂಗಿಕೊಟ್ಟಕೊಡಗಿಹಳ್ಳಿ
[6]ಪುರದಲಿಂಗವುದ್ರಿಸ್ತಂಭ

109

ಅದೇ ಹೋಬಳಿ ಮಾಯಿಗೊಂಡನಹಳ್ಳಿ ಗ್ರಾಮಕ್ಕೆ ದಕ್ಷಿಣ ಪಟೇಲ ಚಿಕ್ಕ ರೇವಣ್ಣನ ಹೊಲದಲ್ಲಿ

[1]ಬಹುಧಾನ್ಯಸಂವತ್ಸರದವಯಿಶಾ
[2]ಖಶು . ೫ ಲು ! ಸೋಮರಾಜವೊಡೆಯ
[3]ರುಹಾಲುಕುಱಿಕಿಯಕಾಲುವಳಿಮಾಯಿಗೊಂ
[4]ಡಿಹಳಿಯ . ಮುತಿನಕಂತೆವೊಡೆಯರಿಗೆ ಭಾವಿ
[5]ಸಿದರುಯಿದಕೆಆರುಆಳುಪಿದರೂ
[6]ವಾರಣಾಸಿಯಲಿಗೋವಕೊಂದಪಾಪಕೆಹೋಹರು

110

ಅದೇ ಹೋಬಳಿ ಭೈರಾಪುರದ ವೊರ ಮುಂದೆ ಇರುವ ಕಲ್ಲು

[1]ವಿಕ್ರುತುಸಂವತ್ಸರದಪ್ರಥಮವಯಿಶಾ
[2]ಖಬ ೧ ಲುಶ್ರೀಮನ್ಮಹಾರಾ

[3]ಜಾಧಿರಾಜರಾಜಪರಮೇಶ್ವ
[4]ರಆಚುತರಾಯಮಹಾರಾಯರು
[5]ಭುಜಬಲಪ್ರತಾಪವೀರರಾಜವೊಡೆಯರು
[6]ಹಾಲುಕುಱುಕಿಯಕೆ . . . . .
[7]ಉಂಬಳಿ ... ...
[8]ನಗೆಕೊಡಗಿಯಾ . . . . . .
[9]ಚಂದ್ರಸೂರ್ಯ್ಯ . . . ಕಾ . .

111

ಅದೇ ಗ್ರಾಮದ ಕರಿಯಮ್ಮನ ಗುಡಿಯಲ್ಲಿ

[1]ಸಾಧಾರಣಸಂವ
[2]ಛರದಕಾರ್ತಿಕ
[3] . . . . .
[4]ವೊಡೆಯರು .
[5] . . . ಲಕುಮಿಾದೇವಿಯ
[6] . . . . . .
[7]ಪುರವನುಕೊ . . .
[8] . . . . .
[9] ... ... ನವನುವಾ
[10]ರಣಸಿ ಯಲಿಕೊಂಡ . .
[11] . . . ಪಿದರೆತಂನಹೆಂ
[12]ಡತಿಯ . . . ವಗೆ
[13]ಕೊಟನುಶ್ರೀ

112

ಹಾಲ್ಕುರ್ಕಿ ಹೋಬಳಿ ಕಸಬಾ ನಂಜಪ್ಪನವರ ಕೃಷ್ಣಪ್ಪನವರ ಬಾಬ್ತುತಾಮ್ರಶಾಸನ

[1]ಶುಭಮಸ್ತು । ಹರೇರ್ಲೀಲಾವರಾಹಸ್ಯದಂಷ್ಟ್ರಾದಂಡಸ್ಸಪಾತುವಃ
[2]ಹೇಮಾದ್ರಿಕಲಶಾಯತ್ರಧಾತ್ರೀಛತ್ರಶ್ರಿಯಂದಧೌ ! ನಮಸ್ತುಂ
[3]ಗಶಿರಶ್ಚುಂಬಿಚಂದ್ರಚಾಮರಚಾರವೇ । ತ್ರೈಲೋಕ್ಯನಗರಾರಂಭ
[4]ಮೂಲಸ್ತಂಭಾಯಶಂಭವೇ । ಸ್ವಸ್ತಿಶ್ರೀವಿಜಯಾಭ್ಯುದಯಶಾ
[5]ಲಿವಾಹನಶಕವರ್ಷಂಗಳು ೧೬೮೪ ಸಂದವರ್ತಮಾನವಾದ
[6]ಚಿತ್ರಭಾನುಸಂವತ್ಸರದಆಷಾಢಬ ೩ ಲ್ಲುಶ್ರೀಮದ್ರಾಜಾಧಿರಾ
[7]ಜರಾಜಪರಮೇಶ್ವರಾಪ್ರತಿಮಪ್ರೌಢಪ್ರತಾಪವೀರನರಪತಿಮಹಿ
[8]ಶೂರಶ್ರೀಕೃಷ್ಣರಾಜವಡೆಯರೈಯನವರುರಾಮೈಗೆಬರಸಿಕೊ
[9]ಟ್ಟಕ್ರಯಭೂದಾನತಾಂಮ್ರಶಾಸನದಕ್ರಮವೆಂತೆಂದರೆ । ಷ
[10]ಟ್ಟಣದಹೋಬಳಿವಿಚಾರದಚಾವಡಿವಳಿತದಹೊಂನವ
[11]ಳ್ಳಿಸ್ಥಳದಹಾಲುಕುರಿಕೆಹೋಬಳಿಯೆರೆಹಳ್ಳಿಗ್ರಾಮ ೧ಕ
[12]ಟ್ಟೆ ೧ ಸಹನಿಚಾರದಚಾವಡಿಶಾನಭಾಗವೆಂಕಟರಮಣೈಬ
[13]ರಸಿದಲೆಖಪ್ರಕಾರಪ್ರಾಕುರೇಖೆಗೂಳೂರುಗ ೧೩ ಲ್ ೩ ಕರಕ್ಕೆಸರಿ
[14]ಬಂದಮಾನ್ಯಗ ೩ ॥ ೨ ॥ ೦ಉಭಯಂರೇಖೆಗದೇಬೆದ್ಧಲುಸಹ
[15]ಗೂಳೂರುಗ ೧೩ ಲ್ಂ ॥ ೦ಕ್ಕೆಪ್ರಮಾಧಿಸಂವತ್ಸರಕ್ಕೆ
[16]ಹುಟ್ಟಿದ್ದುಸುವರ್ನಾದಾಯದವಸಾದಾಯಸುಂಕಪೊಂಮುಸಹ
[17]ಗೂಳೂರುಗ ೨೫ಲ್೨ । ೦ಕ್ಕೆಸಲೆಕಂಗು ೨೮೯೨ ಇಪ್ಪತ್ತೆಂಟುವ
[18]ರಹಉಯೇಳುಹಣದಹುಟ್ಟುವಳಿಗ್ರಾಮವನ್ನುಕ್ರಯ
[19]ಭೂದಾನವಾಗಿಅಪ್ಪಣೆಕೊಡಿಸಬೇಕೆಂದುನೀನುಹೇಳಿ
[20]ಕೊಂಡುಯಿದಕ್ಕೆಸಲುವಕ್ರಯಕಂಗು ೨೮೩ಲ್ಂ ಇಂನೂರೆಂ
[21]ಭೆತ್ತೇಳುವರಹವನ್ನುವರ್ತಕನರಸಿಂಹದಾಸೂ
[22]ಮುಖಾಂತ್ರಸಾಕಲ್ಯವಾಗಿಬೊಕ್ಕಸಕ್ಕೆವೊಪ್ಪಿಸ್ತೆಯಾದ

[23]ಕಾರಣಾಯಿಾಯೆರೆಹಳ್ಳಿಗಾ್ರಮವನುನಿನಿಗೆಕ್ರ
[24]ಯಭೂದಾನವಾಗಿೂಕೆಡಿಸಿಯಿರುವದಕುರಿತುಆಜ್ಞೆ
[25]ರೆಗೆಯಿಾಗಾ್ರಮದಯೆಲ್ಲೆ ಚತುಸ್ಸೀಮೆಯೊಳಗುಳ್ಳನಿಧ್ಯಾದ್ಯ
[26]ಷ್ಟಭೋಗತೇಜನ್ಯಾಂಮ್ಯಂಗಳುನಿನಿಗೆಸಲುವದುಮುಂದೆ
[27]ಯಿಾಗಾ್ರಮವಂನ್ನು ನೀನುಮಾಡುವಆಧಿಕ್ರಯದಾನಪರಿ
[28]ವರ್ತನೆಗಳೆಂಬವ್ಯವಹಾರಚತುಷ್ಟಯಂಗಳಿಗೂಸೆಲು
[29]ವದಾದಕಾರಣಾಪುತ್ರಪೌತ್ರಪಾರಂಪರ್ಯವಾಗಿನಿರು
[30]ಪಾಧಿಕಸೆರ್ವಮಾನ್ಯವಾಗಿಶಾಶ್ವತವಾಗಿಅನುಭವಿಸಿ
[31]ಕೊಂಡುಬರುವದು । ಯೇಕೈವಭಗಿನೀಲೋಕೇಸರ್ವೇ
[32]ಷಾಮೇವಭೂಭುಜಾಂ । ನಭೋಜ್ಯಾನಕರಗಾ್ರಹ್ಯವಿ
[33]ಪ್ರದತ್ತಾವಸುಂದರಾ । ಸ್ವದತ್ತಾಂಪರದತ್ತಾಂವಾಯೋ
[34]ಹರೇತವಸುಂಧರಾಂ । ಷಷ್ಠಿರ್ವರ್ಷಸಹಸಾ್ರಣಿ
[35]ವಿಷ್ಠಾಯಾಂಜಾಯತೇಕ್ರಿಮಿಃ ॥ ಶ್ರೀಕೃಷ್ಣರಾಜ ।

113

ಹಾಲ್ಕುರ್ಕಿಗೆ ಉತ್ತರೆ ಬಡಗಿ ಸೊಂಬಯ್ಯನೆ ಗದ್ದೆಯಲ್ಲ

[1]ಗಉಡಸೇನ	[2]ಬೋವನುತೋ	[3]ಟಕೊಟಗೆಡಿ

114

ಅದೇ ಹೋಬಳಿ ಬ್ಯಾಡರಹಳ್ಳಿಗೆ ಪಶ್ಚಿಮ ದೊಡ್ಡಕೆರಿಯನೆ ಹೊಲದ ಬದಿಯೆಲ್ಲಿ

[1] . ಶಿವರಾಜ . [2] . ಯರುಸನೆನಾಕ	[3] . ತಿಂಮಯಗೆಕೊಟ್ಟ	[4] . ಂಕಗೊಡೆಗಿ

115

ಅದೇ ಹೋಬಳಿ ಆದಿನಾಯ್ಕನಹಳ್ಳಿ ಹನುಮಂತೆ ದೇವಾಲಯದೆಲ್ಲಿರುವ ಕಲ್ಲು

ಪ್ರಮಾಣ— 1 '3 " × 4 '

[1]ಸವಿನೆಯಿಕಬೈ [2]ರನಯಿಕರುಕೊ [3]ಮರಮುದಿಮೈ [4]ಯನವೆರು	[5]ಪತರದತಿಮಜಿಗೆ [6]ಕೊಟಗ್ರಮಸುರ್ಯ [7]ಚಂದ್ರಯಿರುಪರಿ [8]ಯಂತರಲುಕೊಚ	[9]ಗಾ್ರಮ [10]ಯಿದಕೆತಪಿದವೆರೆ [11]ಬಯಗೆಕತ್ತೆ . [12]ಣಿಕಲುವು

116

ಅದೇ ಹೋಬಳಿ ಮಣ್ಣಿಕೆರೆ ಈಶ್ವರದೇವಸ್ಥಾನದೆ ಮುಂದೆ ವೀರಕಲ್ಲು

[1]ಪ್ಲವಸಂವತ್ಸ [2] . . . ಮಹಾ .	[3]ಮಣಿಯುಚಿದ . [4] . . . ಸಗಿಯ . . ಸಾಳುವ	[5]ತುಲುಲುಮುಗಚಿವಾ . [6]ಶಿನಿಲಶಿ

117

ಅದೇ ಹೋಬಳಿ ಸೂರ್ತವೆಳ್ಳಿಗೆ ಪಶ್ಚಿಮ ವಿಶ್ವನಾಥದೇವಸ್ಥಾನದ ಬಳಿ ೧ ನೇ ವೀರಕಲ್ಲು

[1] . ದೇವದೇವಂಪ್ರ . . . .
[2]ಸರಿ . . . . . .
[3] . ಬಸುಂ . . . . . ನಿದೊ .
[4]. ತಾ . ತಾಮರಣ . .
[5]ಶ್ರೀಮತುಸಾರತಉ . . . ಟ್ಟಣಪಜ್ಜ . ಸೆಟ್ಟಿಮ
[6] . ಣಿಕಿಯ . . . ವರ
[7] . . ವಬಂಮ . ಣ
[8]ವದಿ . ಸ . . . ಲಿಸಿದು . . . . ೦ದುಸುರಲೋಕ
[9] . . ಪಿತನಗಲುಸುಬನನೌವತ್ಸರದವ . ಸು ೧ ರ

118

ಅದೇ ಸ್ಥಳದಲ್ಲಿ ೨ ನೇ ವೀರಕಲ್ಲು

[1] . . ಸರ್ತವಳ್ಳಿಯಹಟ್ಟಣದಬಣ್ಣಿಸೆಟ್ಟಿ , . .
[2] . . ನೆಲಿವಲಿಕೆಸಿಯ . . . . . .
[3] . . . . ಕೊಂದುಸುರಲೋಕವ್ಯಾಪಿತ . .
[4]ರನಸುಪುತ್ರನುನಿಲಿಸಿದಕಲ್ಲು ॥ ಬಿಕಬ . . .

119

ಅದೇ ಸ್ಥಳದಲ್ಲಿ ೩ ನೇ ವೀರಕಲ್ಲು

[1] . . . . . ಬಿಡರಿತ . ವಿನ . . . . . .
[2]ದೊ . ದಳ ... ...
[3]... ... ...
[4]ಸಟಿಸುರ ... ...
[5]ದತಾದಿ . . ತ್ಸರದವೈಶಾಕ . . . . .
[6]ಲಬಲದಾವಣಎತ್ತಿ ... ...
[7]ದು ... ...
[8]ಹೂಣತಸಿ ... ...
[9]ಕೆಯಿಅಬಲಹ ... ...
[10]ಕೆಯಿಗದೆಯಿಧ... ...ನು.....
[11]ಮಸಣ... ... ...
[12]...ಬಾ... ... ...ಯಿಧಂರ್ಮಕೆಅಳು
[13]ಅನ್ಯಾಯಚಿಂತ್ಸಿದವರುವಾರಣ್ಸಿ... ...ಕವಿಲೆಯಕೊಂದಪಾಪ
[14]ಕೆಹೋಹರು ॥

120

ಅದೇ ಗ್ರಾಮದ ಕಲ್ಲೇಶ್ವರ ದೇವಸ್ಥಾನದ ಬಳಿ ೧ ನೇ ವೀರಕಲ್ಲು

[1] . ಸ್ತಿಶ್ರೀಮತುಪ್ರಸಸ್ತಿ . . ತಂಸಕವರುಷ ೧೨ . . . . ಸಂವತ್ಸರ . .
[2] . ತ್ರಸುದ್ಧ ೧೦ ಸೋ । ಹಟ್ಟ . . ದಬಿಸೆಟ್ಟಿಯ . . ತಯ... ... .

121

ಅದೇ ಕ್ಯಳೆದಲ್ಲಿ ೨ ನೇ ವೀರಕಲ್ಲು

[1]ನಮಸ್ತುಂಗಸಿರಸ್ತುಂಗಚಂದ್ರಚಾಮರಚಾರವೇತ್ರೈಲೋಕ್ಯನಗರಾರಂಭಂ
[2]ಮೂಲಸ್ತಂಭಾಯಸಂಭವೇ... ... ...
[3]ವಿತ್ತ್ರಿ... ... ...
[4]ತಿರ..... ... ...
[5]ರತಂಮಸಸ್ತ್ರಿ... ... ...ಮಹಾ

(ಮುಂದೆ ಹೋಗಿಧೆ)

122

ಅದೇ ದೇವಾಲಯದೆದೆ ಮುಂದೆ

ಪ್ರಮಾಣ — 1 ' 6 " × 3 '

[1]ನಮಸ್ತುಂಗಶಿರಸ್ತುಂಗಚಂದ್ರಚಾಮ
[2]ರತಾರವೇತ್ರೈಲೋಕ್ಯನಗರಾರಂಭ
[3]ಂಮುಲಸ್ತಂಭಾಯಶಂಭವೇ
[4]ಸ್ವಸ್ತಿಸದುಧಿಗತಪಂಚಮಹಾಶಬ್ದಪುರಾ
[5]ಮಂಡಳೇಶ್ವರಂತ್ರಿಭುವನಮಲ್ಲತಳಕಾಡು .
[6] . . . . . ಬಿನವಸೆಹಾನುಂ . . . . .
[7] . . . ವೀರಗಂಗ . ಱಯಂಗಹೊಯ್ಸಣದೇವಸ್ತ್ರಂಜೀವಿ ।
[8]ಶ್ರೀಪತಿಬನದೊಳು . . . . ಯಾದವ . . ದಕ್ಷಿಣೋರ್ವೀಪತಿಯ
[9]ಪ್ಪಳನ . . . ಯಿನ್ವಾ . . ಯನೆ . . . .
[10]ಹೊಯಿಳ . . . . ಯಿಂದ . . . . . .
[11]ಹೊ . . . . . ಹೊಯಿಳನೆಂದೀನಾಮದಿಂ . .
[12] . ಗಂಮಿಥ್ಯಾ ... .. ಕಾವ್ಯ ....
[13]ತಿರತಿಸಿಱಗಂಯೆ . . ಮದನ್ಯದೆಯ್ದ ... ...
[14]ಅನತರಾಗದಂದುಶ್ರೀಪರಾನನಸಂ . ಹನಾಳ
[15] ... ... ದತೆಱಗ...ಪನಭುಜ ,

(ಮುಂದೆ ಕಾಣುವದಿಲ್ಲ)

123

ಅದೇ ಹೋಬಳಿ ಕಟಕನಕೆರೆ ಗ್ರಾಮದ ಕಲ್ಲೇಶ್ವರ ದೇವರ ಗುಡಿ ಮುಂದೆ

ಪ್ರಮಾಣ — 2 ' 6 " × 5 '

[1]ನಮಸ್ತುಂಗಸಿರಸ್ತುಂಬಿಚಂದ್ರಚಾಮರಚಾರವೇತ್ರೈಲೋಕ್ಯನಗರಾರಂ

2ಭಂಮೂಲಸ್ತಂಭಾಯಷಂಭುವೇ ॥ ಸ್ವಸ್ತಿಶ್ರೀಯಿರ್ಪ್ಪುತ್ತಮವಾಸ್ತುಜಯ
3ಶ್ರೀಯವಿಲಸಿತಾವಾಸಂಲೋಕಸ್ತುತೆಯಶೋವನಿತೆಯವಿಸ್ತಾರಸ್ತಾನಮೆಸವಹೊ
4ಯ್ಸಿಳವಂಷಂ ॥ ಯದುಕುಲಸುಧಾಂಬುನಿಧಿಯೊಳುಮುದದಿಂ
5ದಂಚಂದ್ರನೊಗೆವತೆಱದಿಂದೊಗೆದಂಸದಮಳಗುಣಸಂಪದ್ಯುತನುದಿತೋಂನತಕೀರ್ತ್ತಿಹೊಯ್ಸಳಕ್ಷಿತಿ
6ಪಾಳಂ ॥ ಯದುವಂಶಕಲ್ಪವ್ರಿಕ್ಷದೊಳೊದವಿದನಿಜಶಾಖೆತಾನೆನಲುಕುದಯ್ಸಿದಂಸ[ದ]ಮಳಕೀರ್ತ್ತಿವಿಳಾಸಂ(ಮ)
7ಮುದದಿಂಭುವನೈಕವೀರವಿನಯಾದಿತ್ಯಂ ॥ ಆವಿನಯಾದಿತ್ಯನಸತಿಭಾವೋದ್ಭವೆಮಂತ್ರದೇವತಾಸಂನಿಭೆಸದ್ಭಾವೆಎನೆ
8ಕೆಳೆಯಬರಸಿಯನೀವಸುಧೆಯೊಳೊಲುದುಬಂಣಿಕುಂಬುಧನಿಕರಂ ॥ ಯಾದವವಂಶಕ್ಕಮರೆಮಹೋದಯವೆ
9ಱಿಯಂಗನ್ರಿಪತಿವಿನಯಾದಿತ್ಯಂಗಾದಂತನೆ[ಯ]ಂವಿನಯಂಸೋದರಮೆನೆತನಗೆನೆಗಳ್ದಧೀರೋದಾತ್ತಂ ॥ ಮಾಳವರಾ
10ಜ್ಯಮಾಳಮೆನಿಪಗ್ಗದಧಾರೆಯನಾತ್ಮಸೇನೆಯಿಂಚಾಳ್ಸಿಚಕ್ರವರ್ತ್ತಿಗೆಜಯಂಮಿಗೆತಂನಭುಜಪ್ರತಾಪಮಂಪಾ
11ಳ್ಸಿದಿಗುಜಯಪ್ರಕಟಕೀರ್ತ್ತಿಪತಾಕೆಯನುತ್ತರಾಸೆಯೊಳುಕೀಲ್ಸಿದಂದಿನೇಶನಗಿದೀಕ್ಷಿಸುವಂತೆಱಿಯಂಗಭೂಭು
12ಜಂ ॥ ಮೇರುಗೆಮೇಖಳೆಬಹುಖಳೆವಾರಿರುಹಭವಂಗೆಪೂರ್ನ್ನಖಳೆಚಂದ್ರಂಗಾಧೀರಂಗೇಚಲದೇವಿಗಭೀರ
13ಂಗೆಱಿಯಂಗನ್ರಿಪತಿಗೊಪ್ಪಂಬಡೆಗುಂ ॥ ಉಭ[ಯ]ಕುಳಶುದ್ಧೆಯೆನಿಪಾಶುಭಲಕ್ಷಣೆಗಂಸುಚರಿತಚರಿ
14ತನೆನಿಪ್ಪಾಪ್ರಭುಗಂಮೂವರ್ತ್ತನೆಯರ್ಸುಭಗಬ್ಬರ್ಲ್ಲಾಳವಿಷ್ಣುಉದಯಾದಿತ್ಯರು ॥ ಪೆರ್ದ್ದೊಱಿಸೇತುಪಶ್ಚಿಮ
15ಪಯೋನಿಧಿಪೂರ್ಬ್ಬಪಯೋಧಿಮೇರೆಯಾಗಿರ್ದ್ದಧರಿತ್ರಿಯಂನೆಱಿಯೆತೋಳ್ವವಲದಿಂದಮೆಮಾಡಿದುಷ್ಟರಂ
16ಮರ್ದ್ದಿಸಿತುಷ್ಟಿಯಂಪಡೆದುಸಿಷ್ಟಜನಪ್ರಕರಕ್ಕೆರಾಮನಂತಿರ್ದ್ದನಪಾರಪಉರುಶಮೆತಂನ್ನೊಳೊಡಂಬಡೆವಿ
17ಷ್ಣುವರ್ದ್ಧನಂ ॥ ಯೆತ್ತದಮುಂನವೆತ್ತಿನಡೆಗೊಳ್ಳದಮುಂನವಡುತ್ತುಕೋಪದಿಂಮುತ್ತದಮುಂನವರ್ತ್ತಮನೆತೆ
18ತ್ತಿರಿವಿತ್ತಿರಿಣಾತ್ಮದುರ್ಗ್ಗಮಂಮತ್ಯನವೇಡನಿರ್ಗ್ಗಮಮಿದೆಂದುವಿರೋಧಿಗೆವೀರಲಕ್ಷ್ಮಿಸಾಱುತ್ತಿರೆವಿ
19ಷ್ಣುವಿಕ್ರಮದುಪಕ್ರಮವಾಕ್ರಮಿಸಿತ್ತುಲೋಕಮಂ ॥ ಲಕ್ಷ್ಮಾದೇವಿಮ್ರಿಗಾಧಿಪಲಕ್ಷ್ಮಂಗಿಸದಿರ್ದ್ದವಿಷ್ಣುಗಂ
20ತಂತೆಪಲಂಲಕ್ಷ್ಮಾದೇವಿಲಸಂಮ್ರಿಗೆಲಕ್ಷ್ಮಾನನೆವಿಷ್ಣುಗಗ್ರಸಥಿಯೆನೆ[ಎನೆ]ನೆಗಳ್ದಳು ॥ ಆದಂ
21ಪತಿಗೆತನೂಭವನಾದಂಸುಚರಿತ್ರಮಿತ್ರಗೋತ್ರಪವಿತ್ರಂಯಾದವನ್ರಿಪಕುಳತಿಳಕಂಮೇದಿನಿ
22ಯೊಳುಕೊಲುವಗೆಲುವಕಲಿನರಸಿಂಹ್ವಂ ॥ ಅದಟರಗೋವನಂಜದರನಂಜಿಸುವಂಸುಭಟತ್ರಿಣೇತ್ರ
23ನಾಳಿಪಚಲದಂಕರಾಮನತಿವೀರಭಯಂಕರನತ್ಯುದಾರನೋವದೆಕಲಿವೀರವೈರಿಭಟಭಾರ್ಗ್ಗವನೀನರಸಿ
24ಂಹ್ವನೆಂದುಕಾದದೆಸರಣೆಂದುಬಂದಹಿತವರ್ಗ್ಗಮೆಹೇಳದೆವೀರದೇಳ್ಗೆಯಂ ॥ ಕದನದೊಳಿದಿರ್ಚ್ಚಿದದಟ
25ರಮದರದನಿಯಬಿದುವಿನಲ್ಲಿನಟ್ಟಸರಳುಬಾಲದವೊದಲೊಳುರ್ಚ್ಚಿಲೇಸುವೊಂದದಟವನ್ರಿಪನಾರಸಿಂ
26ಹ್ವದೇವಂಗೆನಿಜಂ ॥ ಅವರಿರ್ಬ್ಬರಿಗಂನಂದನನವಯವಸಂಪೂರ್ನ್ನಮೂರ್ತ್ತಿಮನುಜಮನೋಜಂಭುವನಸ್ತುತ
27ನಿಧಿಯೆಸೆದಂಸವಿನಯದಿಂವೀರಬಲ್ಲುನ್ರಿಪಕುಳತಿಳಕಂ ॥ ಚೋಳಕಳಿಂಗನಂತುಳಿದುಮಾಳವಸೇನೆಯ
28ನೊಕ್ಕಿಲಿಕ್ಕಿನೇಪಾಳನದುಂಡನುಂಡಲೆದುದಾಳಿಯನಿಟ್ಟೆಱಿಯಟ್ಟಪಾಂಡ್ಯನುಂಚಾಳ್ಸಿಯೆತ್ತಲೆತ್ತಿಮುಳ್ಸಿಂನ
29ಡೆತಂದಹವೀರಬಲ್ಲುಭೂಪಾಳಕನೆಂಬಸಂಭ್ರಮಮೆವೈರಿನ್ರಿಪಾಳರಮಂಡಲಂಗಳೊಳೂ ॥ ಸಿಂ
30ಧದೊಳೊರ್ಪ್ಪಿತೋರ್ಪ್ಪಹುಲಿಯಾಹಳೆದರ್ಪ್ಪುದೆನೂಂಕಿಬಲ್ತುವಾ(ಬಂದನೆನೂಂಕಿಬಲ್ಲುವಾ)
31ಬಂದನೆಕೋಡಕಯ್ಯದೆಸೆಯೊಳುಮಿರ್ಗ್ಗುತಂದಉಬಲ್ಲುಕಡಂಗಿದೇಯೆಂದಿರದೊಂದೆನೇಳೊಳನಿತುಂ
32ತುರಗಾವಳಿನೂಂಕಿಬರ್ಪ್ಪುದಿಬಂದುದನೋಜೆಯಾಯತೆನುತೆಸಂಭ್ರಮದಿಂದಮೆಪಾಂಡ್ಯನೋಡಿ
33ದಂ ॥ ತತ್ತನುಜಂಶ್ರೀನರಸಿಂಹ್ವನಾತನಸುತಂಸೋಮಾವನೀಪಾಳಕಂಮನುಜಾಧೀಶನರಸಿಂಹ್ವ
34ನಾತನಮಗಂಬಲ್ಲಾಳವೈರೀಭಕಂಠೀರವಂ ॥ ಸ್ವಸ್ತಿಸಮಸ್ತಭುವನಾಶ್ರಯಂಶ್ರೀಪ್ರಿಥ್ವೀವಲ್ಲಭಂ
35ಮಹಾರಾಜಾಧಿರಾಜಂಪರಮೇಶ್ವರಂದ್ವಾರಾವತೀಪುರವರಾಧೀಶ್ವರಂಯಾದವಕುಲಾಂಬರ
36ದ್ಯುಮಣಿಸರ್ವ್ವಜ್ಞಚೂಡಾಮಣಿಮಲೆರಾಜರಾಜಮಲಪರುಳುಗಂಡಗಂಡಭೇರುಂಡಕದನ
37ಪ್ರಚಂಡನಷಹಾಯಶೂರಯೇಕಾಂಗಿವೀರಶನಿವಾರಸಿದ್ಧಿಗಿರಿದುರ್ಗ್ಗಮಲ್ಲಚಲದಂಕರಾಮವೈರೀಭಕಂ
38ಠೀರವಂರಾಯಹುಲಿರಾಯಗಂಡಭೇರುಂಡಮೂವರುರಾಯರಗಂಡಮಗರರಾಯನಿಮ್ಮೂರ್ಲಚೋ
39ಳರಾಯಸ್ಥಾಪನಾಚಾರ್ಯ್ಯಪಾಂಡ್ಯರಾಜ್ಯಸಮುದ್ಧರಣಕಾಡವರಾಯಕಂದರ್ಪ್ಪಶ್ರೀಮತುವಿಷ್ಣುವರ್ದ್ಧನ

[40]ನಿಸ್ಸಕಂಪ್ರತಾಪಚಕ್ರವರ್ತ್ತಿಹೊಯಿಸಳಭುಜಬಳಶ್ರೀವೀರನಾರಸಿಂಹ್ವದೇವರಸರುಶ್ರೀಮದ್ದೋರಸಮುದ್ರ
[41]ದನಿಜರಾಜಧಾನಿಯೊಳುಸುಖಸಂಕಥಾವಿನೋದದಿಂರಾಜ್ಯಂಗೆಯ್ಯುತ್ತಿರ್ದ್ದಲ್ಲಿಶಕವರುಷ ೧೨೦೫ ದನೆಯ
[42]ಪಾರ್ಥಿವಸಂವತ್ಸರದಮಾಘಶು ೧೦ ಸೋಮಂದುಶ್ರೀವೀರನಾರಸಿಂಹ್ವದೇವರಸರಶ್ರೀಪಾದಪದುಮೋಪಜೀವಿಹಿರಿಯಹಡಿ
[43]ಹಾಱಅಲಾಳದೇವನಾತನತಂಮಹಡಿಹಾಱಸೋವಂಣನವರುತಂಮತಾಯಿಕೆಲ್ಲಂಗೆಱಯಪಟ್ಟಣಸ್ವಾಮಿಕೇತಿಸೆಟ್ಟಿ
ಯಮ
[44]ಗಳುಮಂಚವ್ವೆಯಹೆಸರಲುಗಟ್ಟಿಗನಕೆಱಯಲುಸಿವಲಿಂಗಪ್ರತಿಷ್ಟೆಯಂಮಾಡಿಕೆಱಯಂಕಟ್ಟಿಆಮಂಚೇಶ್ವರದೇವರನಿತ್ಯ
ಸೂ
[45]ಜಿಪಂಚಪರ್ಬ್ಬಅಂಗಭೋಗರಂಗಭೋಗಖಂಡಸ್ಫುಟಿತಜೀರ್ನ್ನೋದ್ಧಾರಕಂಮಠಪತಿತಪೋಧನಗ್ಗಾಹಾರದಾನಕ್ಕಂ
ವಾಗಿಲಾಕುಳಾಘಮಸ
[46]ಮಯಸಮುದ್ಧರಣರಪ್ಪಮಂಚವ್ವೆಯಪುತ್ರರುಅಲ್ಲಾಳದೇವಆತನತಂಮಸೋಪಂಣನವರಪುತ್ರರುನಾಗಂಣ್ಣಸಿಂಗಂ
ಣ್ಣಅಲ್ಲಪಬೊ
[47]ಪ್ಪಿಸೆಟ್ಟಿಯಿಂತಿವರೆಲ್ಲರಂಆಮಂಚೇಶ್ವರದೇವರಸ್ತಾನೀಕರಾಗಿಕಾಲಂಕರ್ಚ್ಚಿಧಾರಾಪೂರ್ಬ್ಬಕಂಮಾಡಿಹಡಿಹಾಱಅಲ್ಲಾಳ
ದೇವನತಂಮ [ಹಿರಿಯ
[48]ಹಡಿಹಾಱಸೋವಂಣ್ಣನವರುಬಿಟ್ಟದತ್ತಿ।ಗಟ್ಟಿಗನಕೆರೆಯೊಳಗೆಆಮಂಚೇಶ್ವರಸ್ಥಾನದಮನೆಕಳನುಆಗಟ್ಟಿಗನಕೆಱಯ
[49]ಕೆಱಯಹಿಂದಣಮೊದಲೇರಿಯಗದ್ದೆಕೊ ೧೦ ಚಱಡೇಶ್ವರದೇವರಗದ್ದೆಯಿಂಕೆಳಗೆನೇಱಲಕಡಹುಗಡಿಲುಮೆಡುಗೂಡಿ
[50]ಕೊ ೧೫ ಅದರಿಂಕೆಳಗೆಕಲ್ಲತ್ತಿಯಮಡುವಿನಗದ್ದೆಕೊ ೫ ಕೇತಣನಕೆಱಯಹಿಂದೆಚಱಡೇಶ್ವರಬಲ್ಲಾಳೇಶ್ವರದೇವ
[51]ರಗದೆಯಿಂಕೆಳಗೆಗದ್ದೆಸ ೧ ಕೊ ೧೫ ಹಳೆಯಕೆಱಯವೊಳಗೆಗದ್ದೆಸ ೧ ಕೊ ೧೫ ಬೆದ್ದಲುಹಿರಿಯಕೆಱಯೊಳಗೆಅ
ಜ್ಜನ
[52]ಕಟ್ಟೆಯಹಿಂದೆಕೆಯಿಕಂಬಮೂನೂರುಬಲ್ಲಾಳೇಶ್ವರದೇವರಹಿಂದಣಬೆದ್ದಲುಕಂಬನೂಱಯಿಪ್ಪತ್ತು
[53]ಹಂಪಿಗೆಱಯಬೆದಲುಕಂಬಯಿಂನೂಱುಅಯಿವತ್ತು ॥ ಯಿಂತೀಧರ್ಮ್ಮಮಂಕೆಡಿಸಿದವರುಗಂಗೆವಾರಣಾಸಿ
[54]ಕುರುಕ್ಷೇತ್ರದಲುಸಾಹಸ್ರಕವಿಲೆಯನಿಸುಬ್ರಾಹ್ಮಣರನೂವಧಿಯಿಸಿದನರಕಕೆಯಿಳಿವರು ॥ ಕೆಱಗಳನೆ
[55]ಯಿದೆಕಟ್ಟಿಸುವರೆತ್ತಿಸುವರುನೆಱದೇಗುಲಂಗಳಂಮಱಳುಗೆಕಾವರುಂನುಡಿದಂತೆಗಂಡರುಂಸಮಯಪ್ರ[ತಿ]
[56]ತಿಪಾಳಕರುಂಗೋತ್ರಪ್ರತಿಪಾಳಕರುಂಅಲ್ಲಾಳದೇವನುಂಸೋವಂಣ್ಣಂ ॥ ಸ್ವದತಂಪರದತ್ತವ್ವಾಯೋಹರೇತಿವಸುಂಧ
[57]ರಾಂಶಷ್ಟಿರ್ವ್ವಶಸಹಸ್ರಣಾವಿಷ್ಟಾಯಾಜಯತೇಕ್ರಿಮಿ ॥ ಶ್ರೀಮಹಾದೇವ ॥

123

ಅದೇ ಗ್ರಾಮದ ಸೋಮೇಶ್ವರ ದೇವಸ್ಥಾನದಲ್ಲಿ

ಪ್ರಮಾಣ — 2′ 5″ × 7′

[1]ನಮಸ್ತುಂಗಶಿರಶ್ಚುಂಬಿಚಂದ್ರಚಾಮರಚಾರವೇತ್ರೈಲೋಕ್ಯದಗರಾರಂಭಂಮೂಲ
[2]ಸ್ತಂಭಾಯಸಂಭವೇ ॥ ಯದುವಂಶಕಲ್ಪಭುಜಾತದಶಾಖೆಯೆನಿಪ್ಪಹೊಯ್ಸಳಾನ್ವಯ
[3]ದೊಳುಭೂವಿದಿತರ್ಪ್ಪಲರಾಗೆಸಮಂತುದಯಂಗೆಯ್ದಂಪ್ರತಾಪವಿನಯಾದಿತ್ತ್ಯಂ ॥
[4] . . . ದೇತಪ್ಪ . . . ಮಾದೊಳಮೇಮಂಡಳಾಗ್ರದಿಂದಿರುಳುಂಸಂಪಾದಿತತೇಜಂತಾಂವಿನಯಾದಿತ್ಯಂದಿನಪ
[5]ನೆನಿಸಿದಾತಂ ಜನಪಂ ॥ ಕಾಮಿನಿಕೆಳೆಯವ್ವೆರಸಿಮಹಾಮಹಿಪಂಗಾನ್ರಿಪಂಗೆನಿರ್ಮ್ಮಳದರ್ಮ್ಮಂಶ್ರೀಮ
[6]ಹಿತಂಗೆಹಿತಂಗೀಭೂಮಿಗೆಗುಣರತುನಭೂಮಿರಮಣೀರತುನಂ ॥ ಸೆಳೆನಡುವಿನುರುಳಿಗುರುಳಿ
[7]ನತೊಳಪಧರದಬೆಳಪಕಣ್ಗಳಬುಜಾನನದೀಕಳಸಕುಚದ್ವಯಕಂದಾರಯೆವಿಳಸಿತವಾದರಸಿಕೆಳೆಯಬರಸಿ
[8]ಯೆತನಗಂ ॥ ಅವರಿರ್ವ್ವರಿಗಂಕ್ರಮದಿಂದವಯವಸಪೂರ್ಣ್ಣಮೂರ್ತ್ತಿಹುಟ್ಟಿದನದಟಂಭುವನಾಧಿಪಸ
[9]ದುಗುಣನಿಧಿಸವಿನಯದಿಂ . . ಕೀರ್ತ್ತಿಯೆಱಯಂಗನ್ರಿಪಂ ॥ ಮಾಳವಸೇನೆಯಂತುಳಿದುಧಾರೆಯನೋವ .

10ಸು . ತೊಳ್ದು . ಚೋಳನನಿಳ್ದುತತ್ಕಟಕಮಂಕಡುಪಿಂನೆಱಿಸೂಱಿಗೊಂಡುದಾಶಾಳಿಕಳಿಂಗನಂಮುಱಿದ .
11ಗಸೆದಾತಭುಜಪ್ರತಾಪಮಂಕೇಳಿದಿಶಾಧಿಪಂನೆಗಳ್ದ . . , ದಿಂದೆಱಿಯಂಗಭೂಭುಜಂ . ಮಾ . .
12ರಾಜನ . . . . . ಟುಸೂಱಿಯಗೊಂಡಂಚಾಳುಕ್ಯ . . . . . ನ್ರಿಪತಿ . . .
13ಮಿಯಲೆಱಿಯಂಗನ್ರಿಪಂ ॥ ಪಿಱಿಯಂನಿಖಿಳೋರ್ವ್ವೀ . ನಿಸಿರ್ದ್ದೆಱಿಯಂಗನ್ರಿಪಾಳತಿಳಕನಂಗನೇಚಲೆ . .
14 . . . ಶೀಲಗುಣದಿಂನೆಱದೇಚಲದೇವಿಯಂತುನೋಂತರುಮೊಳರೇ ॥ ಜೆಟ್ಟಗರದಟರನದಟಲೆವೊಟ್ಟಜಿ .
15 . ಗಂ . ಮಹಾನುಭಾವಂಮುದದಿಂಪುಟ್ಟದರೇಚಲವ್ವೆಗೆನೆಟ್ಟೆನೆಬಲ್ಲಾಳವಿಷ್ಟುವುದೆಯಾದಿತ್ಯರು ॥ ...
16 . . ಕೊಂಗುನೆಂಗಲಿತಳಕಾಡುರಾಯರಾಯಪುರಂಮಲೆಮಲೆಯಂ . . ಗಂಗವಾಡಿ . . . .
17ದೊಳೆರಿಪುನ್ರಿಪರದುರ್ಗ್ಗಮಂವಿಷ್ಣುನ್ರಿಪಂ ॥ ಸುರಭೂರುಹದೆಸೆವಂಕುರಧರೆಗೊಗೆದುದೆನಲ್ಕೆನಾರಸಿಂಹ
18ನ್ರಿಪಾಳಂವರವಧುಲಕ್ಷ್ಮಾಂಬಿಕೆಗಂಪರಮಗುಣಾಂಬುಧಿಗವಗ್ರಸುತನೆನೆನೆಗಳ್ದಂವಿಸಸನದೊಳುಕಿ
19ಳ್ತಡೆನಿಂನಸಿಲತೆವೈರಿಗಳಹ್ರಿದಯದೊಳುನಾಂಟಿತಳಿರ್ಪಸರಿಸಿಬೆಂನೊಳುಬಳೆಉದುಪೊಸತೊಂದಚ್ಚರಿ
20ನೃಸಿಂಹಭಾವಿಸೆಜಗದೊಳು . . . . . ಚಲ . . . . . ನರಸಿಂಹಕ್ಷಿತೀಶ್ವರಂ ॥ . . . . . .
21 . . . . . ಯೆನಭಾನುಸುತಪ್ರತಿಮನತಿಬಳಂಬಲ್ಲಾಳಂ ॥ . . . . . .
22 . . ವನೀಪಾಳನಂಕುಡನೆದೇಶಮನೊಡೆಯ . . ರಗಮಂಭಂಡಾರಮಂ . . . . . .
23 . . . . . ಱಿಯ . ಬಲ್ಲಾಳಭೂಪಂ , ...
24 . . . ॥ ಸ್ವಸ್ತಿಸಮಸ್ತಭುವನಾಶ್ರಯಶ್ರೀಪ್ರಿಥ್ವೀವಲ್ಲಭಮಹಾರಾಜಾಧಿರಾಜಪರಮೇಶ್ವರಪರಮಭಟ್ಟಾರಕಯೂ
25ದವಕುಲಾಂಬರದ್ಯುಮಣಿರಾಯಚೂಡಾಮಣಿವಾಸಂತಿಕಾದೇವೀಲಬ್ಧವರಪ್ರಸಾದ . . .
26 . . . . . ಪರೂಪಕಂದರ್ಪ್ಪಂರಾಯ . . . . ಮುಖ . . . . . ರಾಯ . . . .
27ಶೂರಶನಿವಾರಸಿದ್ಧಿಗಿರಿದುರ್ಗ್ಗಮಲ್ಲಚಲದಂಕರಾಮ . . . . . ಭುಜ . . . . . .
28ಳವೀರಬಲ್ಲಾಳದೇವರಸರು . . . . . ನೆಲವೀಡಿನೊ
29ಳುಪ್ರಿಥ್ವೀರಾಜ್ಯಂಗೆಯ್ಯುತ್ತಮಿರೆತತ್ಪಾದಪದ್ಮೋಪಜೀವಿಗಳಪ್ಪಉಮಾದೆವಿಯ . . . .
30ನಮಹಿಮೋಂನತಿಯೆಂತೆಂದಡೆ ॥ ಆನೆಗಳ್ದಬಲ್ಲಾಳಮಹೀನಾಥನಮ . ಪರ್ಗ . . . . .
31ಚರಿತದುರಿತದೂರಂವಿನೆಯಪರ . . ಮಂತ್ರಿ . . ವದೇವನು ॥ ಸ್ವಸ್ತಿಸಮ . . .
32ಪಂನರುಂಸರಣಾಗತವಜ್ರಪಂಜರರುಂನುಡಿದುತೆಗಂಡೆರುಂ . . . . . .
33 . . ವರುಂತಪ್ಪೆತಪುವರುಂತ . . ನಿವೆರುಂ . . . ಹನ . . . . . .
34 . ಸರುಂರಾಜಪೂಜ್ಯರುಂವುಭೆಯನಾಡೊಳು . . . . . .
35ಯಸತಿಚಟ್ಟವ್ವೆಗಂಪುಟಿದ . . . ರುಚಂದ್ರಸೆಟ್ಟಬಿಟ್ಟಸೆಟ್ಟ . . . ನಾಡೊಳು . . . ಮ
36ಹದೇವ . . . ಯರಕೀರ್ತ್ತಿಯೆಂತೆನೆ ॥ ಕ್ಷಿತಿವಿನುತ . . . . . ಸತಿಗಂ . . . . . .
37 . ನಪುತ್ರರುಸದುವಿನೆಯರುಸಾಹಿತ್ಯ . . . . ಘನ
38ಷೌರ್ಯ್ಯಂಮುತ್ತೈಯಂಮನುಮಾರ್ಗ . . ಣಸೆಟ್ಟಿಯಾತನಪುತ್ರಂಜನವಿನುತಂಚಉಡಿ . . ಯ .
39ತನ . . . ದೆಂತುವಧಿಕನೀಮಹದೇವಂ ॥ ಆ . . . . . .
40 . . ಜನಮನೋಜಂಕರದೀವದಾನಿತಾನೆನೆಧರಗನುಪಮದಿಂದವೀವನೀಮಹದೇವಂ ॥ . . . . . .
41ಲೆತ್ತಿದಂಕುಸಂಕಡುಚೆಲುವಂಧರೆಚಉಡಿಸೆಟ್ಟಿಯಪುತ್ರಂತೊಡರ್ದರಿಗೆಗಂಡನಂಕೋಲೆಬಡವ
42ರಿಗಾಧಾರವಲುತೆಮಹದೇವಸೆಟ್ಟಿ ॥ ಈವಗುಣಂಬೇಡಲೊಡಂಕಾವಗುಣಂಭೀತಿಯಿಂದೆಮಱಿವು
43ಗಲೆನಸುಂಭೂವಿನುತಮಾಗಿತೋರ್ಪ್ಪಉಭಾವಕಮಹದೇವಸೆಟ್ಟಿಯೆವಸುಮತಿಯೊಳು । ಸತಿಯಂಪೋ
44ಲಿಸೆಕಾಮನಸತಿಯಂನಳುಮಹದೇವಸೆಟ್ಟಿಯಪತಿಬ್ರತಿಯೊಳಗೆಮಾರವ್ವೆಗೆಪತಿಯಲ್ಲ
45ದಪವಿತ್ರಗೋತ್ರವಲ್ಲದಸತಿಯರು ॥ ಕೆಱಿಬನಉರುಶಿವಾಲ್ಯವನೆಱಿಚರಿತಂಮಾಡಿರೂಡಿಮಹ
46ದೇವಸೆಟ್ಟಿಯುಪಱವಿಡಿವೆತ್ತಂಜಗದೊಳುಕಱಿಕೊರಳಪದಾಬ್ಜಭ್ರಿಂಗನೀವಸುಮತಿಯೊಳು ॥ ಕೆಱಿ
47ಗಳನೆಯಿದೆಕಟ್ಟಿಸುವನೆತ್ತಿಸುವಂನೆಱಿದೇಗೆಲಂಗಳಂಮಱಿವುಗೆಕಾವ . . ರುಮಂಸರಣಾಗತ

[48]ವಪ್ರಮಾಂಜಂನುಂಕಱಿಕೊರಳೇಶಪಾದಪದುಮೋಕ್ಕರಭ್ರಿಂಗನೇನುತ್ತಕೀರ್ತ್ತಿಸಲುಕಱಿಕೊರಳೇಶ್ವರಂಕೊ
[49]ಡುಗೆಮಹದೇವಸೆಟ್ಟಿಯಭೀಷ್ಟಸಿದ್ಧಿಯ ॥ ಸ್ವಸ್ತಿಸಮಸ್ತಗುಣಸಂಪಂನ್ನರಪ್ಪಹೊಯ್ಸಣದೇಶ
[50]ಕೆಸೆಸರುವೆತ್ತಮಹದೇವಸೆಟ್ಟಿ ಆಲುರುಸಾರತವಳ್ಳಿಯನಾಳುತಗಟ್ಟಿಗನಕೆಱಿಯಕೆಱಿಯ
[51]ಕಟ್ಟಿಸಿದೇವಾಲ್ಯಮನೆತ್ತಿಸಿಮಹದೇವಸೆಟ್ಟಿಸಕವರುಶ ೧೧೨೩ ನೆಯರೌದ್ರಿಸಂವತ್ಸರಶ್ರವಣ
[52]ಸುದ್ದಸೋಮವಾರದಂ[ದು]ಚೌಡೇಸ್ವರದೇವರನಿವೇದ್ಯಕ್ಕಂನುದಾದೀವಿಗೆಅಂಗಭೋಗಜೀರ್ಣೋದ್ಧಾರಕ್ಕಂಮಡಪ
[53]ತಿತಪೋಧನರಾಹಾರದಾನಕ್ಕಂವಾಗಿಲಾಕುಳಾಗಮಸಮೆಯಸಮುದ್ಧರಣರಪ್ಪಸೋಮಜೀ
[54]ಯನಮಗಮಾರಜೀಯನಕಾಲಂಕರ್ಚ್ಚಿಧಾರಾಪೂರ್ವ್ವಕಂಮಾಡಿಬಿಟ್ಟದತ್ತಿಗದ್ದೆಸಲ . . ತಂ
[55]ಣನಕೆಱಿಯಹಿಂದೆಗದ್ದೇಕೊ ೧೦ ಬೆದ್ದಲೆದೇವಾಲ್ಯದಮುಂದೆಕಂಭಯಿಂನೂಱುಯಿಂ
[56]ತೀಧರ್ಮ್ಮಮಂಕೆಡಿಸಿದವರುಗಂಗೆವಾರಣಾಸಿಕುರುಕ್ಷೇತ್ರದೊಳ್ಸಹಸ್ರಕವಿಲೆಯಂಬ್ರಾಹ್ಮಣರಕೊಂ
[57]ದನರಕಕಿಳಿವರು ॥ ಸ್ವದತ್ತಂಪರದತ್ತಾಂವಾಯೊಹರೇತಿವಸುಂಧರಾಶಷ್ಟಿರ್ವ್ವಶಸಹಸ್ರಣಿವಿಷ್ಟಾಯಾಂಜಾಯ
[58]ತೇಕ್ರಿಮಿ ॥ ಜೆಯಸಂವತ್ಸರದವೈಸಾಖಸುದ್ದಪಾಡ್ಯಬುಧವಾರದಂದುಶ್ರೀಬಿಜಯೇಸ್ವ
[59]ರಪುರವಾದಮಾಚನಕಟ್ಟದಸ್ಥಾನಾಪತಿ...ಗಳು . ವ . ಚಿಕ್ಕಮಲೆಯನಾಯಕ . .
[60]ಕಾರವುಳಮಲೆಯನಾಯ .. ..ತಂಮ ... ಜೀವಿತವೆಂಬ... ... ... ಕನಿಕ್ಕಿ

(ಮುಂದೆ ಕಾಣುವದಿಲ್ಲ)

124

ಹೊಂನವಳ್ಳಿ ಹೋಬಳಿ ಹರಚನಹಳ್ಳಿ ಮಲ್ಲೇಶ್ವರ ದೇವಸ್ಥಾನದ ಉತ್ತರಕಡೆ ಗೋಡೆಯಲ್ಲಿ

[1]ಶ್ರೀಮನ್ಮಹಾಮಂಡಳೇಶ್ವರಅಉಭ
[2]ಳರಾಜನಕುಮಾರಕೇಶವರಾಜೇಂದ್ರನು
[3]ಕವಿಲಿಂಗರಸರಗೆಕೊಟ್ಟಸರ್ವ್ವಮಾಂನ್ಯ
[4]ದಆಘ್ರಾರಹರೀಶ್ವರಪುರಯಿದಕ್ಕೆ
[5]ತಪ್ಪಿದವನುತಂನಗುರುವಿನಹೆಂಡತಿಯ
[6]ನುತಾಯನೂತಂಗಿಯನುಕೆಡವನು

125

ಅದೇ ದೇವಸ್ಥಾನದ ಬಳಿ ವೀರಕಲ್ಲು

[1] . ನಮಸ್ತುಂಗಸಿರಸ್ತುಂಗಚಂದ್ರಚಾಮರಚಾರವೇತ್ರೈಳೋಕ್ಯನಗರಾರಂಭ
[2] ... ...
[3] . . . . . .
[4]ವಪೊಯ್ಸಣಶ್ರೀವೀರಸೋಮೇಶ್ವರದೇವರುಪ್ರಿಥ್ವೀ
[5] . . . ರಾಜ್ಯಂಗೆಯ್ಯುತ್ತಮಿರೆ ॥
[6]ಸಕವರುಶ . ೧೧೭೭ನೆಯ . . . ಆಶ್ವೀಜ
[7]ಬ ೧೦ ಆ . . . . . .
[8]ದನಾಡಆನೆಮ್ಮರ್ . ಲಕ್ಕ . . . . . .ಮಗ . .
[9] . ಯಾಂತರನಿಱಿದುಬೆರುಗದೆಬೆಂಕೊಂಡುಸುರಲೋಕಪ್ರಾಪ್ತನಾದ ॥

126

ಪ್ರಮಾಣ — 1′6″ × 2′6″

ಹೊನ್ನವಳ್ಳಿ ಗ್ರಾಮದ ಹಜಾಮ ಲಿಂಗನಮನೆಯಲ್ಲಿ ಇದ್ದಕಲ್ಲು

[1]ಸುಭಮಸ್ತುಸ್ವಸ್ತಿಶ್ರೀಜಯಾದ್ಭುದ
[2]ಯಶಾಲಿನಾಹನಶಕವರುಶ ೧೪೬೮

[3]ನೆಯವರ್ತ್ತಮಾನಕೆಸಲುವವಿಶ್ವಾ
[4]ವಸುಸಂವತ್ಸರದಭಾದ್ರಪದಕ್ಕು
[5]ಧ್ದ ೧೨ ಆದಿವಾರದಲ್ಲಿ ಶ್ರೀಮಂನ್ನ[6]
[9]ಮಹಾರಾಜಾಧಿರಾಜರಾಜಪರಮೇಶ್ವ
[7](ಶ್ವ)ರಶ್ರೀವೀರಪ್ರತಾಪಶ್ರೀಕದಾಶಿವದೇವ
[8]ಮಹಾರಾಯರಕಾಯ್ಯಕೆಕರ್ತರಾದರಾ
[9]ಮರಾಜವೋಡೆಯರುನಾಯಿಂದಕೊಂಡ
[10]ಜಗೆಮೆಚ್ಚಿಕೊಬದುದೇಶನಾಳ್ವಿಂದರಿ

[11]ಗೆಕುಳದೆಱಿಗೆಸುಂಕಯೀನುಂಟಾದದನು
[12]ಸರ್ವಮಾನ್ಯವಾಗಿಬಿಟ್ಟರುಯಿದಕೆ . . .
[13]ಅಳುಪ್ಪಿದರೂತಂಮತಂದೆತಾಯ . . . .
[14] . ಯಲಿಕೊಂದಪಾಪಕೆಹೋಹರು . . .
[15]ಡಸಿದವರುನಾಯಪಾರಸವನು . .
[16] . ಆನ . . . . ಆಯ . . . . . .
[17]ಸುವದುಗಾ ಮದಸೇನಬೋವನಬರಹ

127

ಅದೇ ಗಾನುಪ ಬ್ಯೆರೇದೇವರ ಗುಡಿಯಲ್ಲಿ

[1]ಶ್ರೀಕಲಿನಾಥಾಯನಮಃ ॥ ಸ್ವಸ್ತಿ ಹೋಸಳವಂ
[2]ಶಾಯಯದುಮೂಳಾಯಯಬ್ಬವಕ್ಷತ್ರ
[3]ಮೌಕ್ತಿಕಸಂತಾನಂಪೃಥ್ವೀನಾಯಕಮಂಡನಂ ॥ ಸ್ವಸ್ತಿಸಮಸ್ತಭುವನಾಶ್ರಯಂಶ್ರೀಪೃ
[4]ಥ್ವೀವಲ್ಲಭಂಮಹಾರಾಜಾಧಿರಾಜಂಪರಮೇಶ್ವರಂದ್ವಾರಾವತೀಪುರವರಾಧೀಶ್ವರಯಾ
[5]ದವಕುಲಾಂಬರದ್ಯುಮಣಿಶರ್ವ್ವಜ್ಞಾಚೂಡಾಮಣಿಮಲೆರಾಜರಾಜಮಲ
[6]ಪರೊಳುಗಂಡಗಂಡಭೇರುಂಡಕದಷಪ್ರಚಂಡನೇಕಾಂಗವೀರನಸಹಾಯಶೂ
[7]ರಸನಿವಾರಸಿದ್ಧಿಗಿರಿದುರ್ಗ್ಗಮಲ್ಲಚಲದಂಕರಾಮಸಂಗಾಮಭೀಮವೈರೀಭಕ
[8]ಂತೀರವನುಂಮಗತರಾಜ್ಯನಿರ್ಮ್ಮೂಲಪಾಂಡ್ಯಕುಲಸಮುದ್ಧರಣಂಚೋ
[9]ಳರಾಜ್ಯಪ್ರತಿಷ್ಠಾಚಾರ್ಯ್ಯನಿಸ್ಸಂಕಪ್ರತಾಪಚಕ್ರವರ್ತ್ತಿಹೊಯಿಸಣ
[10]ಶ್ರೀವೀರಬಲ್ಲಾಳದೇವರಸರು . . . ಧರಾವಳಯಮಂಪರಿರಕ್ಷಿಸಿದುಷ್ಟ
[11]ನಿಗ್ರಹಶಿಷ್ಟಪ್ರತಿಪಾಳನಂಗೆಯ್ದುದೋರಸಮುದ್ರದನೆಲವೀಡಿನೋಳುಸುಖ
[12]ಸಂಖತಾವಿನೋದದಿಂರಾಜ್ಯಂಗೆಯ್ಯುತುವಿರೆ ॥ ಸ್ವಸ್ತಿ ಶ್ರೀಜಯಾಭ್ಯುದಯಶಾ
[13] . . . ; ೧೧ . . . . ಸಂವತ್ಸರದಭಾದ್ರಪಢಸು ೭ ಬಿ ದಂದು
[14]ಸ್ವಸ್ತಿ ಶ್ರೀಮನುಮಹಾಸಾಮಂತ . . . . . ಮಾಕ್ರೊರ್ಕ್ಕಲಭೈರವಮಾ
[15]ಭಕ್ತಜನಕಲ್ಪವಿಕ್ಷನುಂ . . . ರುಂ . ಗಂಭೀರರತ್ನಾಕರರುಂಅ
[16]ಭಿಮಾನ . . . . . ವಂದಿಜನಕುವಳಯಾನಂದಪೂರ್ಣ್ಣಿ
[17]ಚಂದ್ರನುಂ . . . . ದೀನಾರ್ತ್ತಿಜನವಸಂತನುಂಗೋ
[18]ತ್ರಪವಿತ್ರನುಂ . . . ಧನುಂಸತ್ಯರಾಧೇಯನುಂಸರಣಾಗತ
[19]ವಜ್ರಪಂಜರನುಂ . . . . . ಪ್ರಜೆಮೆಚ್ಚೆಗಂಡನುಂತಪ್ಪೆ
[20]ವಪ್ಪುವನುಂ . . . . . ಕರಂಡನುಂಶ್ರೀಕ
[21]ಲಿದೇವರದಿ . . . . . ಹೊಂನವಳ್ಳಿಯ
[22]ಕೆಲ್ನೆಯ . . . . . ಮಾಬೇಯ
[23]ನಾಯ್ಕಬಯಿಜೆಯನಾಯ್ಕ . . . . ಮಾಳನಾಯ್ಕಸದಾ
[24]ಸಿವನಾಯ್ಕ . . . . . ನಾಯ್ಕರಮಗನಾ
[25]ಯ್ಕನಾಯ್ಕಯಿನ್ತಿವರುಮುಂತಾಪಮಹಾನಾಯ್ಕರುನಾಯ್ಕಕೆಱಿಯಬೋ
[26]ಗಿಯನಕೆಱಿಯಗಳಸಮಸ್ತಪ್ರಜೆಗಳಿಗಿಕೊಟ್ಟಸಿಲಾಸಾಶನದಕ್ರಮೆ
[27]ಮೆತೆಂದಡೆ ... ... ಕಲಿನಾಥದೇವರದೇವಾಲ್ಯದಲುಗಡಿಖಹೊಯ್ದ .

28ಯಲುಯಿಪ್ಪತಯಿದುಕಂಬತೋಟಸ್ಥಳದಭೂಮಿಗೆಓಂದುಹೊಂನಮೊದಲ
29ಕುಳಆಒಂದುಹೊಂನಮೊದಲ ... ... ಕೆವರುಷಂಪ್ರತಿಸಮಸ್ತಬಳಿಸಹಿ
30ತಕಟ್ಟುಗುತ್ತಗೆಪಿಂಡಾದಾನವಾಗಿಎರಡುಗದ್ಯಾಣದಆಱುಹಣವಿನಮಯ್ಯಾ
31ದೆಯಲುಪ್ರಜೆಗಳುಆಚಂದ್ರಾರ್ಕ್ಕಸ್ಥಾಯಿಯಾಗಿತಂಪುತಂಮತೋಟದ
32ದಾಯವನುಕುಳಮೆರಿಯಾದೆಯಲಿರಿಸಿಇರುತಬಹರುಬೇವಿನಕೆಯ್ಯತೋಂ
33ಟವನು ... ...ಹೊಂನಮೊದಲಕುಳದತೋಟಕೆ ... ಹೊ
34ಂನಸಿದಾ ... ... ವರು... ಯರಮನೆಯಲುಗಂಡುಸಂತಾನದ
35ವರುಪ್ರಥಮದಮದುವೆಯಾದಡಂಪ್ರಥಮದಪುತ್ರೋತ್ಸಾಹವಾದಡಂ
36ತೋಟ ... ... ಹಣವಿನೆಮರಿಯಾದೆಯಲು ... ...
37 .. ಅಡಕೆಯ ... ... ಳತೋಟಕೆಅ ... ಗೊಱಲ...
38 ... ಸಿದಾಯವ ... ಪ್ರತಿಸಂವತ್ಸರಂ .....
39 ... ಸದಲು ... ... ನಹೆಗ್ಗಡೆಕೊಲು ...
40 ... ... ವಮಹೋನ್ನತಿಯ ...
41ಕೊಂಡೆವನುನಾ ... ... ಕಾಣಿಕೆಯಕೊಡ .. ಪ್ರಜೆ ...
42... ... ... ನಾಯಕನಕೆಱಿಬೋಗೆಯನಕೆಱಿ
43ಬೇವನಕೆಱಿ ... ... ಕ್ರಯದಾನಕೆಸಲ್ಲುದು.
44ಪ್ರಜೆಗಳೊಳಗೆ ... ...
45ಕಾಣಿಕೆಯ ... ಪ್ರಜೆ ... ...

(ಮುಂದೆ ಕಾಣುವದಿಲ್ಲ)

128

ಅದೇ ಗ್ರಾಮದ ಕೈಲಾಸೇಶ್ವರ ದೇವಸ್ಥಾನದಲ್ಲಿ

1ನೆಮಸ್ತುಂಗಶಿರಶ್ಚುಂಬಿಚಂದ್ರಚಾಮರಚಾರವೇತ್ರೈಳೋಕ್ಯನಗರಾರಂಭಮೂಲಸ್ತಂಭಾಯಸಂಭವೇ । ಶಿವಾಯ
2ಭೇದಂಮೂರ್ತ್ತಿಯೊಳಲ್ಲದೆಭೇದಂಪರಮಾರ್ತ್ಥತತ್ವದೊಳುಸಲ್ಲದೆನಲುಮೊದೇವರಾದಭೇದದಮಾದೇವಂದೇವನೀ
3ಗೆಸುಖಸಂಪದಮಂ॥ ಸ್ವಸ್ತಿಹೊಯ್ಸಳವಂಶಾಯಯದುಮೊಳಾಯಯದ್ಭವಃಕ್ಷತ್ರಮೌಕ್ತಿಕಸಂತಾನಂಪ್ರಿಥ್ವೀನಾಯ
4ಕಮಂಡನಂ । ಮೊಳವರಾಜ್ಯಮೂಲಮೆನಿಪಗ್ಗದಧಾರೆಯನಾತ್ಮಸೇನೆಯಿಂಚಾಳ್ಸಿಚಕ್ರವರ್ತ್ತಿಗೆಜಯಂಮಿಗೆತಂನಭು
ಜಪ್ಪ
5ತಾಪಮಂಪಾಳ್ಸಿದಿಗುಜಯಪ್ರಕಟಕೀರ್ತ್ತಿಪತಾಕೆಯನುತ್ತರಾಸೆಯೊಳುಕೀಲ್ಸಿದಂದಿನೇಶನಗಿದೀಕ್ಷಿಸುವಂತೆಱಿಯಂಗ
6ಭೂಭುಜಂ ॥ ಉಭಯಕುಳಸುದ್ಧೆಯೆನಿಪಾಸುಭಲಕ್ಷಣೆಗಂಸುಚರಿತಚರಿತನೆನಿಪ್ಪಾಪ್ರಭುಗಂಮೂವರ್ತ್ತನೆಯಸ್ಸು
7ಬಗರ್ಬ್ಬಲ್ಲಾಳವಿಷ್ಣುವ್ರದಯಾದಿತ್ಯರು ॥ ಚೇರಮವೈರಮಂಬಿಸುಡುಪಾಂಡ್ಯಕಡಂಗದಿರಂಧ್ರರಂಧ್ರಮಂಪಾರದಿರೊ
8ಡ್ಡಗೊಡ್ಡಮನದಂಬಿಡುಮಾಳವಕಾಳಗಕ್ಕಿಮೈದೋರದೆಸಾರೆಲೇತಿಗುಳನೀಂಜಗುಳೆಂಬುದಪಾರವೀರದೋರ್ವ್ವೀರಗಭೀರ
ಧೀರ
9ತೆವಿನಿಶ್ರುತಘೋಸನೆಬಲ್ಲುಭೂಪನಂ ॥ ತಲೆಗಾ . . ಸಳಬವರದೊಳೆಲೆಲೇಯೆಂದೋಡಸಾರ್ಚ್ಚಿದರಿನ್ರಿಪವಡೆಯಂಗೆಲೆ
ಕೊ
10ಂಡುವೀರದೊಳ್ಪಂಸಲೆಮೆಱಿವಂವಸುಧೆಹೊಗಳಲುದಯಾದಿತ್ಯಂ ॥ ಮೊದಲೊಳುಹೊಯ್ಸಳರಾಜ್ಯಲಕ್ಷ್ಮಿಯೊದವಂತೋ
11ಳ್ಬಲುಪಿನಿಂತಾಳ್ದಿತಂನುದಯಂರಂಜಿಸೆತಂನಬಲುಪೊದವೆತಂನಾರ್ಪ್ಪೇಱಿತಂನಾಜ್ಞೆಮೀಱಿದಿಶಾಚಕ್ರಮನೊ
12ತ್ತಿಕೊಂಡುತಳಕಾಡಂಗಂಗರಾಜ್ಯಕ್ಕೆತಾಂಮೊದಲಾದಂಯದುವಂಸವರ್ದ್ಧನಕರಂಶ್ರೀವಿಷ್ಣುಭೂಪಾಳಕಂ ॥ ಎತ್ತದ
ಮುಂ

13ನವೆತ್ತಿನಡೆಗೊಳ್ಳದಮುಂನವಡುತ್ತುರ್ಕೋಪದಿಂಮುತ್ತದಮುಂನವಿತ್ತವನೆತೆತ್ತಿರಿವಿತ್ತಿರಿವಾತ್ಮದುರ್ಗ್ಗಮಂಮತ್ತೆನವೇ
ಡನಿರ್ಗ್ಗಮ

14ಮಿದೆಂದುವಿರೋಧಿಗೆವೀರಲಕ್ಷ್ಮಿಸಾಱುತ್ತಿರೆವಿಷ್ಣುವಿಕ್ರಮದುಪಕ್ರಮಮಾಕ್ರಮಿಸಿತ್ತುಲೋಕಮಂ ॥ ಜಾರನೆವ
ಜ್ರಿವಂಹ್ನಿಸು

